# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

Grow with Us, Advertise in Hampi Times
Print & Digital Media
"Looking to bring your sales and services to readers Fingertips? HAMPI TIMES is the ideal platform"



Call:9448633038/email:hampitimes@gmail.com

ಸಂಪುಟ:03 • ಸಂಚಿಕೆ: 11 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 03.07.2025 • ಗುರುವಾರ • ಪುಟ:04 • ಬೆಲೆ:2
Volume:03 • Issue: 11 • PRGI No:KARKAN/2023/88055 • VIJAYANAGARA • 03.07.2025 • Thursday • Page:04 • Rs:2

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 02–07–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1625.20 ಅಡಿ |
| ಒಳ ಹರಿವು | 32767 ಕ್ಯುಸೆಕ್ |
| ಹೊರ ಹರಿವು | 1701 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 77.144 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1585.87 ಅಡಿ |
| ಒಳ ಹರಿವು | 13410 ಕ್ಯುಸೆಕ್ |
| ಹೊರ ಹರಿವು | 297 ಕ್ಯುಸೆಕ್ |
| ಸಾಮರ್ಥ್ಯ | 7.909 ಟಿಎಂಸಿ |

## ರಾಬಕೊವಿ ಜಿಲ್ಲಾ ನಿರ್ದೇಶಕರ ಚುನಾವಣೆಗೆ 52 ಉಮೇದುವಾರಿಕೆ ಸಲ್ಲಿಕೆ

**ಹಂಪಿ ಟೈಮ್ಸ್ ಬಳ್ಳಾರಿ**

ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ ಒಟ್ಟು 52 ನಾಮಪತ್ರ ಸಲ್ಲಿಕೆಯಾಗಿವೆ.

ರಾಯಚೂರು–15, ಬಳ್ಳಾರಿ ಜಿಲ್ಲೆ–15, ಕೊಪ್ಪಳ–22 ನಾಮಪತ್ರ ಸಲ್ಲಿಕೆಯಾಗಿವೆ. ಜು.2 ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿತ್ತು. ಜು.3 ರಂದು ನಾಮಪತ್ರಗಳ ಪರಿಶೀಲನೆ ಮತ್ತು ಕ್ರಮಬದ್ಧ ನಾಮಪತ್ರಗಳ ಘೋಷಣೆ ಮಾಡಲಾಗುತ್ತದೆ. ನಾಮಪತ್ರಗಳನ್ನು ಹಿಂಪಡೆಯಲು ಜು.4 ಕೊನೆಯ ದಿನ ಜು.10 ರಂದು ಮತದಾನ ನಡೆಯಲಿದೆ. ಎಂದು ಚುನಾವಣಾಧಿಕಾರಿ ಪಿ.ಪ್ರಮೋದ್ ತಿಳಿಸಿದ್ದಾರೆ.

# ತುಂಗಭದ್ರಾ ಜಲಾಶಯದ 6 ಗೇಟ್‌ಗಳಿಂದ ನದಿಗೆ ನೀರು

### ಒಳಹರಿವು ಹೆಚ್ಚಿದಂತೆ ನದಿಗೆ ಹೆಚ್ಚುವರಿಗೆ ನೀರು | ನದಿಪಾತ್ರದ ಜನರಿಗೆ ಮುಂಜಾಗ್ರತೆವಹಿಸಿ



**ಹಂಪಿ ಟೈಮ್ಸ್ ಹೊಸಪೇಟೆ**

ತುಂಗಭದ್ರಾ ಜಲಾಶಯಕ್ಕೆ ಒಳಹರಿವು ಹೆಚ್ಚಾದ ಹಿನ್ನೆಲೆಯಲ್ಲಿ, ಜಲಾಶಯದ ಆರು ಗೇಟ್‌ಗಳನ್ನು ಎರಡು ಅಡಿಗಳಷ್ಟು ಬುಧವಾರ ಎತ್ತರಿಸಿ 10400 ಕ್ಯುಸೆಕ್ ನೀರನ್ನು ನದಿಗೆ ಬಿಡುಗಡೆ ಮಾಡಿದ್ದು, ಒಳಹರಿವು ಹೆಚ್ಚಿದಂತೆ ಹೆಚ್ಚಿನ ನೀರನ್ನು ನದಿಗೆ ಬಿಡಲಾಗುತ್ತದೆ. ನದಿಪಾತ್ರದಲ್ಲಿ ವಾಸಿಸುವ ಜನರು ಎಚ್ಚರಿಕೆಯಿಂದ ಇರುವಂತೆ ತುಂಗಭದ್ರಾ ಮಂಡಳಿ ಸೂಚಿಸಿದೆ.

ತುಂಗಭದ್ರಾ ಜಲಾಶಯಕ್ಕೆ 32,722 ಕ್ಯೂಸೆಕ್ಸ್ ನೀರು ಹರಿದುಬರುತ್ತಿದೆ. ತುಂಗಾ ಅಣೆಕಟ್ಟು, ವರದಾ ನದಿ ಮತ್ತು ತುಂಗಭದ್ರಾ ಜಲಾಶಯದ ಕಣಿವೆ ಪ್ರದೇಶದಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಒಳಹರಿವು ಹೆಚ್ಚಾಗಿದೆ.

ತುಂಗಭದ್ರಾ ಜಲಾಶಯ 105.788 ಟಿಎಂಸಿ ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದಿದ್ದರೂ, ತುಂಗಭದ್ರಾ ಜಲಾಶಯಗಳ ಕ್ರಸ್ಟ್ ಗೇಟ್‌ಗಳ ಸುಸ್ಥಿತಿಯಲ್ಲಿ ಇಲ್ಲದ್ದರಿಂದ ಕೇವಲ 80 ಅಡಿಗಳಷ್ಟು ನೀರನ್ನು ಮಾತ್ರ ತಡೆಹಿಡಿಯುವ ಸಾಮರ್ಥ್ಯವನ್ನು ಹೊಂದಿವೆ ಎಂದು ತಜ್ಞ ತಂತ್ರಜ್ಞರು ಸೂಚಿಸಿದ ಬೆನ್ನಲ್ಲೆ ಈ ಬಾರಿ ಆಡಳಿತ ಮಂಡಳಿ ಇದೇ ಮೊದಲಬಾರಿಗೆ ಶೇ.75ರಷ್ಟು ಡ್ಯಾಂ ಭರ್ತಿಯಾದ ಕೂಡಲೆ ನದಿಗೆ ನೀರು ಹರಿಸುತ್ತಿದೆ.

ಜಲಾಶಯದಿಂದ ನೀರು ಬಿಡುಗಡೆಯಾಗಿದ್ದು, ಹಂತ ಹಂತವಾಗಿ ನೀರಿನ ಹೊರಹರಿವು ಹೆಚ್ಚಾಗುವ ಸಾಧ್ಯತೆಯಿದ್ದು, ನದಿಪಾತ್ರದಲ್ಲಿ ವಾಸಿಸುವ ಜನರಿಗೆ ಮುನ್ನೆಚ್ಚರಿಕೆ ವಹಿಸಬೇಕು. ಮೀನುಗಾರರು, ರೈತರು ಮತ್ತು ನದಿ ದಡದಲ್ಲಿ ಜಾನುವಾರುಗಳನ್ನು ಮೇಯಿಸುವವರು ಸುರಕ್ಷಿತ ಸ್ಥಳಗಳಿಗೆ ತೆರಳಬೇಕು ಎಂದು ಕೇವಲ ಎಚ್ಚರಿಕೆ ನೀಡುವುದು ಸಾಕಾಗುವುದಿಲ್ಲ. ರೈತರ ನಿರೀಕ್ಷೆಗೂ ಮುನ್ನ ನದಿಗೆ ನೀರು ಬಿಡಲಾಗುತ್ತಿರುವುದರಿಂದ ಪ್ರವಾಹ ಪೀಡಿತ ಪ್ರದೇಶಗಳ >>4

# ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ ವಿಶೇಷ ಅಭಿಯಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ಮತ್ತು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಮಧ್ಯಸ್ಥಿಕೆ ಸಂಧಾನ ಯೋಜನಾ ಸಮಿತಿ ವತಿಯಿಂದ 'ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ ಅಭಿಯಾನ'



ವು ಜುಲೈ 01, 2025 ರಿಂದ ಅಕ್ಟೋಬರ್ 07, 2025 ರವರೆಗೆ ನಿಗದಿಪಡಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಕೆ.ಜಿ.ಶಾಂತಿ ಅವರು ತಿಳಿಸಿದ್ದಾರೆ.

'ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ' ಅಭಿಯಾನವು ದೇಶದ ಎಲ್ಲಾ ತಾಲ್ಲೂಕು ನ್ಯಾಯಾಲಯಗಳು, ಜಿಲ್ಲಾ ನ್ಯಾಯಾಲಯಗಳು ಮತ್ತು ಹೈಕೋರ್ಟ್‌ಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಮಧ್ಯಸ್ಥಿಕೆಯ ಮೂಲಕ ಇತ್ಯರ್ಥಪಡಿಸಲು ಇದು 90 ದಿನಗಳ ತೀವ್ರವಾದ ಅಭಿಯಾನವಾಗಿದೆ. ಸುಪ್ರೀಂ ಕೋರ್ಟ್‌ನ ಮಧ್ಯಸ್ಥಿಕೆ ಮತ್ತು ಸಂಧಾನ ಯೋಜನಾ ಸಮಿತಿಯ ಸಹಯೋಗದೊಂದಿಗೆ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರವು ಭಾರತದ ಮುಖ್ಯ ನ್ಯಾಯಮೂರ್ತಿ ಮತ್ತು ಭಾರತದ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರು ಮತ್ತು ಎನ್‌ಎಲ್‌ಎಸ್‌ಎ ಕಾರ್ಯನಿರ್ವಾಹಕ ಅಧ್ಯಕ್ಷರು ಮತ್ತು ಎಂಸಿಪಿಸಿ ಅಧ್ಯಕ್ಷರು ಆದ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಮಾರ್ಗದರ್ಶನದಲ್ಲಿ ರಾಷ್ಟ್ರಕ್ಕಾಗಿ ವಿಶೇಷ ಮಧ್ಯಸ್ಥಿಕೆ ಅಭಿಯಾನ ರೂಪಿಸಿದೆ.

ಹಾಗಾಗಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ 'ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ' ಅಭಿಯಾನದಂತೆ ಜುಲೈ 1, 2025 ರಿಂದ ಅಕ್ಟೋಬರ್ 7, 2025 ರವರೆಗೆ ಮಧ್ಯಸ್ಥಿಕೆ ಮೂಲಕ ರಾಜಿಯಾಗಬಹುದಾದ ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣಗಳನ್ನು ಮಧ್ಯಸ್ಥಿಕೆ ಮೂಲಕ ಇತ್ಯರ್ಥಪಡಿಸಲಿದ್ದು, ಈ ಅಭಿಯಾನಕ್ಕೆ ಎರಡೂ ಜಿಲ್ಲೆಯ ವಕೀಲರು ಮತ್ತು ಕಕ್ಷಿದಾರರು ಸಹ ಸಹಕಾರ ನೀಡಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

For Advertisements
Contact: 9448633038

# ವಚನ ಸಾಹಿತ್ಯಕ್ಕೆ ಫ.ಗು.ಹಳಕಟ್ಟಿ ಕೊಡುಗೆ ಅನನ್ಯ

### ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯದಲ್ಲಿ ವಚನ ಪಿತಾಮಹ ಫ.ಗು. ಹಳಕಟ್ಟಿ ಜನ್ಮದಿನಾಚರಣೆ



**ಹಂಪಿ ಟೈಮ್ಸ್ ಹೊಸಪೇಟೆ**

ಫ.ಗು. ಹಳಕಟ್ಟಿ ಅವರು ಕೇವಲ ಸಾಹಿತಿಯಾಗಿರದೆ, ಒಬ್ಬ ದೂರದೃಷ್ಟಿಯ ಚಿಂತಕರಾಗಿದ್ದರು. 12ನೇ ಶತಮಾನದ ಬಸವಾದಿ ಶರಣರ ವಚನಗಳು ಕಾಲದ ಗರ್ಭದಲ್ಲಿ ಮರೆಯಾಗುತ್ತಿದ್ದಾಗ, ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸುವ ಬೃಹತ್ ಕಾರ್ಯಕ್ಕೆ ಹಳಕಟ್ಟಿ ಅವರು ತಮ್ಮ ಜೀವನವನ್ನೇ ಮುಡಿಪಾಗಿಟ್ಟರು ಎಂದು ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಡಾ.ಅಕ್ಕಮಹಾದೇವಿ ಹೇಳಿದರು.

ನಗರದ ಕ್ಷೇತ್ರಶಿಕ್ಷಣಾಧಿಕಾರಿ ಕಾರ್ಯಾಲಯದಲ್ಲಿ ಬುಧವಾರ ಫ.ಗು.ಹಳಕಟ್ಟಿಯವರ ಜನ್ಮದಿನದ ನಿಮಿತ್ತ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಫ.ಗು.ಹಳಕಟ್ಟಿಯವರ ಅವಿರತ ಶ್ರಮದಿಂದಾಗಿ ಇಂದು ವಚನ ಸಾಹಿತ್ಯ ಕನ್ನಡ ಸಾರಸ್ವತ ಲೋಕದಲ್ಲಿ ಅಮರವಾಗಿದೆ. ಅವರು ಇಲ್ಲದೆ ಹೋಗಿದ್ದರೆ, ವಚನ ಸಾಹಿತ್ಯದ ಬಹುಪಾಲು ಭಾಗ ನಮಗೆ ದೊರೆಯುತ್ತಿರಲಿಲ್ಲ. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಅವರ ಕೊಡುಗೆ ಅನನ್ಯ. ಅಂದಿನ ದಿನಗಳಲ್ಲಿ ಸಾರಿಗೆ ಸಂಪರ್ಕವಿಲ್ಲದೆ, ಹಸ್ತಪ್ರತಿಗಳನ್ನು ಹುಡುಕಿಕೊಂಡು ಹಳ್ಳಿ ಹಳ್ಳಿ ಸುತ್ತುವುದು, ಓಲೆಗರಿಗಳಲ್ಲಿ ಬರೆದ ವಚನಗಳನ್ನು ಓದಿ ಅರ್ಥೈಸಿಕೊಳ್ಳುವುದು ಸುಲಭದ ಕೆಲಸವಾಗಿರಲಿಲ್ಲ. ಹಣಕಾಸಿನ ತೊಂದರೆಗಳ ನಡುವೆಯೂ ಸ್ವಂತ ಸಂಪಾದನೆಯಲ್ಲಿ ವಚನಗಳನ್ನು ಮುದ್ರಿಸಿ ಪ್ರಕಟಿಸಿದರು ಎಂದು ಹೇಳಿದರು.

ಪ್ರಭಾರಿ ಕ್ಷೇತ್ರಶಿಕ್ಷಣಾಧಿಕಾರಿ ಶೇಖರಪ್ಪ ಹೊರಪೇಟೆ ಮಾತನಾಡಿ, ಫ.ಗು.ಹಳಕಟ್ಟಿ ಅವರ ತ್ಯಾಗ ಮತ್ತು ಬದ್ಧತೆ ಇಂದಿನ ಪೀಳಿಗೆಗೆ ಮಾದರಿಯಾಗಿದೆ. ನಾವು ನಮ್ಮ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಹೆಮ್ಮೆ ಪಡಬೇಕು. ಹಳಕಟ್ಟಿ ಅವರಂತಹ ಮಹನೀಯರ ಆದರ್ಶಗಳನ್ನು ಮೈಗೂಡಿಸಿಕೊಂಡು, ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ನಮ್ಮ ಕೊಡುಗೆ ನೀಡಬೇಕು" ಎಂದರು.

ಶಿಕ್ಷಣ ಸಂಯೋಜಕ ಶಿವರಾಮಪ್ಪ ಎಚ್, ಪತ್ರಾಂಕಿತ ವ್ಯವಸ್ಥಾಪಕ ವೆಂಕಟೇಶ .ಡಿ, ಸೂಪರಿಂಡೆಂಟ್ ನಜಿಮುನಿಸಾ, ಮುಖ್ಯ ಶಿಕ್ಷಕರಾದ ಬಿ.ವಿ.ಶ್ರೀಧರ, ಅಯ್ಯಪ್ಪ, ಪ್ರವೀಣಾ ಬಿ.ಹಲಗಣಿ, ಸವಿತಾ, ದೈಹಿಕ ಶಿಕ್ಷಕ ಹನುಮಾನಾಯ್ಕ ಇಲಾಖೆಯ ಸಿಬ್ಬಂದಿ ವರ್ಗ ಇದ್ದರು.

# ವಿಜಯನಗರ ಶ್ರೀ ಕೃಷ್ಣದೇವರಾಯ ವಿವಿಯಲ್ಲಿ ಎರಡು ಪ್ರಕರಣಗಳ ತನಿಖೆ ಆರಂಭ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಕಾನೂನು ಬಾಹಿರವಾಗಿ ನಡೆದ ಎರಡು ಪ್ರಕರಣಗಳ ಕುರಿತು ತನಿಖೆಗೆ ನೇಮಿಸಿದ ಬೆಳಗಾವಿ ಜಿಲ್ಲಾ ಸತ್ರ ನ್ಯಾಯಾಲಯದ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಡಿ.ಎಸ್.ಶಿಂಧೆ ಅವರ ನೇತೃತ್ವದಲ್ಲಿ ತನಿಖೆ ಆರಂಭಗೊಂಡಿದೆ ಎಂದು ವಿವಿಯ ಕುಲಪತಿ ಪ್ರೊ.ಎಂ.ಮುನಿರಾಜು ಅವರು ತಿಳಿಸಿದ್ದಾರೆ.

ಘಟಿಕೋತ್ಸವ ಪ್ರಮಾಣ ಪತ್ರಗಳ ಕಾನೂನು ಬಾಹಿರ ವಿತರಣೆ ಪ್ರಕರಣ ಕುರಿತಂತೆ ಈಗಾಗಲೇ ಮಂಗಳವಾರ ಮತ್ತು ಬುಧವಾರದಂದು ಕೆಲ ದಾಖಲಾತಿಗಳ ಪರಿಶೀಲನೆ ಕೈಗೊಳ್ಳಲಾಗಿದೆ. ಮುಂದಿನ ವಿಚಾರಣೆ ಜು.09 ರಂದು ನಿಗದಿಪಡಿಸಲಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದ ವಿದ್ಯಾರ್ಥಿ ಸಾಕ್ಷಿದಾರರ ಹಾಗೂ ಪರೀಕ್ಷಾ ವಿಭಾಗದ ಸಿಬ್ಬಂದಿಗಳ ವಿಚಾರಣೆ ಕೈಗೊಳ್ಳಲಾಗುತ್ತದೆ. ಮತ್ತೊಂದು ಪ್ರಕರಣವಾದ ಡಾ.ಅನಂತ್ ಎಲ್ ಝುಂಡೇಕರ್ ಅವರ ಪ್ರಕರಣದ ವಿಚಾರಣೆಯನ್ನು ಸಹ ಕೈಗೆತ್ತಿಕೊಳ್ಳಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ. ಎರಡು ಪ್ರಕರಣಗಳ ಕುರಿತಂತೆ ಯಾವುದೇ ಆಂತರಿಕ ಹಾಗೂ ಬಾಹ್ಯ ಒತ್ತಡಗಳಿಗೆ ಒಳಗಾಗದೇ ನಿಷ್ಪಕ್ಷಪಾತವಾಗಿ ತನಿಖೆ ಕೈಗೊಳ್ಳುವಂತೆ ನಿವೃತ್ತ ನ್ಯಾಯಾಧೀಶರಿಗೆ ಬೆಂಬಲ ನೀಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಪ್ರಕರಣಗಳ ಕುರಿತು ಮಾಹಿತಿ ನೀಡಲಾಗುವುದು ಎಂದು ಎಂದು ವಿಶ್ವವಿದ್ಯಾಲಯದ ಕುಲಪತಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಶ್ರೀಕೃವಿವಿ ಪ್ರಭಾರ ಕುಲಸಚಿವರಾಗಿ ಡಾ.ಜಿ.ಪಿ ದಿನೇಶ್ ನೇಮಕ



ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲ ಯದ ಪ್ರಭಾರ ಕುಲಸಚಿವರಾಗಿ ನಿರ್ವಹಣಾಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಜಿ.ಪಿ.ದಿನೇಶ್ ಅವರನ್ನು ನೇಮಕ ಮಾಡಲಾಗಿದ್ದು, ಬುಧವಾರ ಅಧಿಕಾರ ವಹಿಸಿಕೊಂಡರು. ನಿಕಟಪೂರ್ವ ಕುಲಸಚಿವರಾಗಿದ್ದ ರುದ್ರೇಶ್.ಎಸ್.ಎನ್ ಅವರ ವರ್ಗಾವಣೆಯಿಂದ ತೆರವಾದ ಸ್ಥಾನಕ್ಕೆ ಪ್ರೊ.ಜಿ.ಪಿ.ದಿನೇಶ್ ಅವರನ್ನು ಹಂಗಾಮಿ ಕುಲಸಚಿವರಾಗಿ ಆದೇಶಿಸಿ ವಿವಿಯ ಕುಲಪತಿ ಪ್ರೊ.ಎಂ.ಮುನಿರಾಜು ಅವರು ಕಚೇರಿ ಪತ್ರ ಹೊರಡಿಸಿದ್ದಾರೆ.

## SSLC ಈ ಬಾರಿ ಫಲಿತಾಂಶ ನಮ್ಮದೆ

ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ

ಹಂಪಿ ಟೈಮ್ಸ್ ಮಾರ್ಗದರ್ಶಿ

ಟಾಪರ್ ಆಗಲು ಇಂದಿನಿಂದಲೇ ಅಭ್ಯಾಸದಲ್ಲಿ ತೊಡಗಿಸಿಕೊಳ್ಳಿ

www.hampitimes.com / https://epaper.hampitimes.com

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲೀಷ್

Hampi Times Margadarshi 2025-26

## A HERO

### Most important 2 marks questions and answers

**1. Swami's father drew his attention to a report in the newspaper. What was the report about?**
**Answer:** The report was about the bravery of a village lad. When he was returning home in the jungle path suddenly he came face to face with tiger. He faced the tiger and climbed up the tree and stayed half a day. Afterwards, some people came that way and killed the tiger.

**2. Why did swami's father want him to sleep alone in the office room?**
**Answer:** Swami was ordered by his father to sleep alone in his office so as to fight against the fear of darkness. Swami had the habit of sleeping with his granny which his father didn't like. Swami's father wanted to test his courage and so he ordered him to sleep in the office alone one night.

**3. How did swami react when his father challenged him to sleep alone in the office room?**
**Answer:** Swami's father challenged him to sleep alone in the office room to prove his bravery. Swami was initially hesitant and tried to make excuses, but eventually, he had no choice and he accept the challenge. Swami tried to change the subject by asking his father to join the cricket club and made some desperate attempts to escape from his father.

**4. Why did Swami conclude that his father's proposition was frightful?**
**Answer:** Swami had a habit of sleeping beside his granny. He was afraid of sleeping alone. In this condition, Swami concluded that his father's proposition (suggestion) was frightful.

**5. Why do you think Swami looked at his granny and his mother while following his father to the room?**
**Answer:** Swami looked at his granny and his mother because he hoped that they would come to his rescue and ask his father not to compel Swami to sleep in the office room.

**6. As silence deepened in the room, what did Swami remember?**
**Answer:** As silence deepened in the room, Swami remembered all the stories of devils and ghosts he had heard from his chum Mani and the stories about Muni swami's father and his fourth class friend who had been carried off by a ghost.

**7. What made swami's father, his cook and his servant rush up to the office room?**
**Answer:** Swami had to sleep alone in his father's office room as per his father challenge. Swami thought of ghosts to came and take him away. At that time suddenly a thief came into the room and Swami got scared and bit the thief. The thief shouted so loudly and that makes his father, cook and servant rush up to the office room.

**8. Though Swami was not courageous, he became a hero overnight. How?**
**Answer:** Swami thought the moving thing was a devil and he bit its ankle. It was a burglar and he made a terrible cry in pain. His father, cook and servant came there and caught the burglar. So Swami was honored and congratulated and became a hero.

**9. Why were congratulations showered on Swami?**
**Answer:** Congratulations were showered on Swami because unknowingly he helped to catch the most notorious house-breakers of the district.

**10. Do you think Swami really wanted to join the police? If not, what did he want to be?**
**Answer:** No, Swami, was not interested to join the police. He wanted to become an engine driver, railway guard or a bus conductor.

SAIMANI ENTERPRISES
Sales & Distribution Genuine Toshiba Photocopiers and Galtech Smart Panels,
M: 9686663132

Prepared by :
R.B.GURUBASAVARAJ
Asst Teacher. GHS
Basarakodu, HB.Halli Taluk



## ಬೆಳಕಿನ ಹಾದಿ

# ಸಾಧನೆಗೆ ಬೇಕು ದೃಢ ನಿರ್ಧಾರ

■ ಜಯಶ್ರೀ.ಎಂ.ಕರ್ಜಗಿ. ಹುಬ್ಬಳ್ಳಿ

ಜೀವನದಲ್ಲಿ ಸಾಧಿಸಬೇಕೆನ್ನುವ ಛಲವೊಂದಿದ್ದರೆ ಸಾಧನೆಗೆ ಎಷ್ಟೇ ಅಡೆತಡೆ ಇದ್ದರೂ ಮನುಷ್ಯನ ಸಾಧನೆಯ ಹಠದ ಮುಂದೆ ಇವೆಲ್ಲವೂ ಗೌಣ. ನಮ್ಮ



ಜೀವನದಲ್ಲಿ ನಾವು ಮಾಡುವ ಸಣ್ಣ ಸಾಧನೆಗಳೇ ದೊಡ್ಡ ಸಾಧನೆಗಳನ್ನು ಮಾಡಲು ನಮಗೆ ಪ್ರೇರಣೆಯಾಗುತ್ತವೆ. ನಮಗೆ ನಾವೇ ಆದರ್ಶವಾಗಬೇಕೇ ಹೊರತು ಇನ್ನೊಬ್ಬರ ಜೀವನ ಕಥೆಯು ನಮಗೆ ಆದರ್ಶವಾಗಬಾರದು.

ನಮ್ಮ ಜೀವನದಲ್ಲಿ ನಡೆಯುವ ಕೆಲವು ಘಟನೆಗಳು ನಮಗೆ ಏನಾದರೂ ಸಾಧಿಸಲು ಪ್ರೇರಣೆಯಾಗುತ್ತವೆ ಎನ್ನುವುದಕ್ಕೆ ಈ ಕಥೆಯು ಉದಾಹರಣೆಯಾಗಬಹುದು. ವಿಕಾಸ ಎಂಬ ಹುಡುಗ ಒಭತ್ತನೇ ತರಗತಿ ಪಾಸಾಗಿ ಜೀವನದಲ್ಲಿ ಪ್ರಮುಖ ಘಟ್ಟವಾಧ ಹತ್ತನೇ ತರಗತಿಯನ್ನು ಒಂದು ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದ. ತಂದೆ ಕ್ಷೌರಿಕ ವೃತ್ತಿ ಮಾಡಿಕೊಂಡಿದ್ದ. ವಿಕಾಸನು ತಂದೆಯ ಸಹಾಯಕ್ಕೆಂದು ಆಗಾಗ ಅಂಗಡಿಗೆ ಹೋಗುತ್ತಿದ್ದ. ತಂದೆಯ ಕೆಲಸವನ್ನು ನೋಡುತ್ತಾ ನೋಡುತ್ತಾ ಅವನೂ ಕೆಲಸ ಕಲಿತುಕೊಂಡ. ವಿಕಾಸ ತಂದೆಗೆ ಆಸರೆಯಾಗಿ ತಾನೂ ಕ್ಷೌರದ ಅಂಗಡಿ ಪ್ರಾರಂಭಿಸಿದ. ಬೆಳಿಗ್ಗೆ ಶಾಲೆಗೆ ಹೋಗುವ ಮೊದಲು ಮತ್ತು ಸಂಜೆ ಶಾಲೆಯ ನಂತರ ಕ್ಷೌರ ವೃತ್ತಿ ಮಾಡುತ್ತಾ ಸಂಪಾದನೆ ಮಾಡುತ್ತಲೇ ವಿದ್ಯಾಭ್ಯಾಸ ಮುಂದುವರೆಸಿದ. ಕಷ್ಟಪಟ್ಟು ದುಡಿಮೆ ಮಾಡುತ್ತಾ ಹತ್ತನೇ ತರಗತಿ ಓದಿ ಶೇಕಡಾ 90ರಷ್ಟು ಅಂಕಗಳೊಂದಿಗೆ ಪಾಸಾದ.

ತಾನು ಮಾಡುತ್ತಿದ್ದ ವೃತ್ತಿಯ ಬಗ್ಗೆ ಕಿಂಚಿತ್ತೂ ಕೀಳರಿಮೆ ಇರಲಿಲ್ಲ. ಉನ್ನತ ಅಧಿಕಾರ ಇರುವ ಹಲವಾರು ಸರಕಾರಿ ನೌಕರರು ಅಂಗಡಿಗೆ ಬಂದಾಗ ಅವರಿಗೆ ಸಿಗುತ್ತಿದ್ದ ಗೌರವ ಸನ್ಮಾನ ನೋಡಿ ತಾನೂ ಅವರಂತೆ ಉನ್ನತ ಅಧಿಕಾರಿಯಾಗಬೇಕೆಂಬ ತನ್ನ ಮನದಾಳದ ಆಸೆಯನ್ನು ಅವರಿಗೆ ವ್ಯಕ್ತಪಡಿಸುತ್ತಿದ್ದ. ಅದಕ್ಕೆ ಅವರೆಲ್ಲ ಸೂಕ್ತ ಮಾರ್ಗದರ್ಶನ ಮಾಡುತ್ತಿದ್ದರು. ಅವರು ಹೇಳಿದಂತೆ ಹಗಲು ಕ್ಷೌರಿಕ ವೃತ್ತಿ ಮಾಡುತ್ತಾ ರಾತ್ರಿ ಓದುತ್ತಿದ್ದ. ಬಾಹ್ಯ ವಿದ್ಯಾರ್ಥಿಯಾಗಿ ಕಾಲೇಜಿಗೆ ಸೇರಿದ. ಚೆನ್ನಾಗಿ ಓದಿ ಪದವಿ, ಸ್ನಾತಕೋತ್ತರ ಪದವಿ ಪಡೆದ. ಮುಂದೆ ಪಿಎಚ್ಡಿಯನ್ನೂ ಮಾಡಿದ. ದೊಡ್ಡ ಕಾಲೇಜಿನಲ್ಲಿ ಪ್ರೊಫೆಸರ್ ಆಗಿ ಕೆಲಸಕ್ಕೆ ಸೇರಿದ. ಅವನ ಜೀವನದ ದಿಕ್ಕೇ ಬದಲಾಯಿತು. ನೂರಾರು ವಿದ್ಯಾರ್ಥಿಗಳಿಗೆ ಆದರ್ಶ ವ್ಯಕ್ತಿಯಾದ.

ಕೈಯಲ್ಲಿ ಲಾಂಗು, ಮಚ್ಚು ಹಿಡಿದುಕೊಂಡು ತಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳುವ ಯುವಕರಿಗೆ ವಿಕಾಸನಂತವರು ಆದರ್ಶಪ್ರಾಯರಾಗಲಿ. ಸಾಧನೆ ಯಾರ ಸ್ವತ್ತೂ ಅಲ್ಲ, ಸಾಧಿಸಬೇಕೆನ್ನುವ ಛಲ ಮತ್ತು ದೃಢ ನಿರ್ಧಾರಗಳೇ ಸಾಧನೆಗಳಿಗೆ ಮೆಟ್ಟಿಲುಗಳು. ನನ್ನಿಂದ ಸಾಧ್ಯವೇ ಎನ್ನುವ ಮನೋಕೀಳರಿಮೆ ಬಹಳಷ್ಟು ಜನರಿಗೆ ಅಡ್ಡಿಯಾಗಿದೆ. ಕೆಲಸ ಯಾವುದಾದರೇನು ಮಾಡುವ ಮನಸ್ಸಿರಬೇಕು. ಸಾಧಿಸುವ ಛಲ ಇರಬೇಕು. ಇದಕ್ಕೆ ವಿಕಾಸನೇ ಸಾಕ್ಷಿ. ಕೈ ಕೆಸರಾದರೆ ಬಾಯಿ ಮೊಸರು ಎನ್ನುವ ಗಾದೆಯ ಹಾಗೆ ಕೆಲಸ ಯಾವುದಾದರೇನು, ಮಾಡಲು ಹಿಂಜರಿಕೆ ಬೇಡ. ಕಾಯಕವೇ ಕೈಲಾಸ ಎಂದು ಬಸವಣ್ಣನವರು ಹೇಳಿದ ಹಾಗೆ ಕೆಲಸ ಮಾಡುತ್ತಾ ಓದಿನ ಕಡೆಗೆ ಗಮನಕೊಡಿ.

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಅಜ್ಜಿಗೆ..... ಮತ್ತೆ ತಾಯ್ತನ

ತಮ್ಮ ದೇ ರಕ್ತ ಮಾಂಸ ಹಂಚಿಕೊಂಡು ಹುಟ್ಟಿದ ಮಕ್ಕಳಿಗೆ ತಂದೆ ತಾಯಿಯಾಗುವುದೆಂದರೆ ಅದು ಬಹಳ ಖುಷಿಯ ವಿಚಾರ, ಆದರೆ ಮೊಮ್ಮಕ್ಕಳಿಗೆ ಅಜ್ಜ ಅಜ್ಜಿ ಆಗೋದೆಂದರೆ ಡಬಲ್ ಧಮಾಕ. ಹರೆಯದ ವಯಸ್ಸಿನ ಕೌಟುಂಬಿಕ ಜವಾಬ್ದಾರಿ, ವಿಶ್ರಾಂತಿರಹಿತ ಜೀವನ ಮನೆಯ ಕೆಲಸಗಳ ಅವಿರತ ಹೋರಾಟಗಳ ನಡುವೆ ಕಾಲದೊಂದಿಗೆ ಗುದ್ದಾಡುತ್ತಾ ಮಕ್ಕಳನ್ನು ಬೆಳೆಸುವುದು ಆಕೆಯ ಪಾಲಿಗೆ ಒಂದು ಯುದ್ಧವೇ ಸರಿ.

ಮಕ್ಕಳ ಎಲ್ಲ ರೀತಿಯ ಬೆಳವಣಿಗೆಗೆ, ಒಳ್ಳೆಯ ಮತ್ತು ಕೆಟ್ಟ ಭಾವಗಳಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಆಕೆಯೇ ಕಾರಣ ಎಂಬ ಕುಟುಂಬದ ಉಳಿದ ಸದಸ್ಯರ ಭಾವ ಆಕೆಯಲ್ಲಿ ಇನ್ನಿಲ್ಲದ ಜವಾಬ್ದಾರಿಯನ್ನು ತುಂಬಿ ಮಕ್ಕಳನ್ನು ಬೆಳೆಸುವ ನಿಟ್ಟಿನಲ್ಲಿ ಆಕೆಯನ್ನು ತುಸು ಹೆಚ್ಚೇ ಶಿಸ್ತಿನ ಸಿಪಾಯಿಯನ್ನಾಗಿಸುತ್ತದೆ ಎಂದರೆ ತಪ್ಪಿಲ್ಲ. ಅದೆಷ್ಟೇ ಮಕ್ಕಳನ್ನು ಪ್ರೀತಿಸಿದರೂ ಅದನ್ನು ತೋರಿಸಿಕೊಳ್ಳಲಾಗದ, ತೋರಿಸಿಕೊಂಡರೂ ಒಂದು ಬಿಗುವಿನಲ್ಲಿ ಇರಬಹುದಾದ ಅವಶ್ಯಕತೆಗಳನ್ನು ಆಕೆ ಮನಗಂಡಿರುತ್ತಾಳೆ. ತಾನು ತಾಯಿ ಆಗಿರುವಾಗ ಪಾಲಕತ್ವ ಆಕೆಗೆ ತುಸು ಕಷ್ಟ. ಹತ್ತು ಹಲವು ಹೊಸ ಅನುಭವಗಳನ್ನು ಆಕೆ ಕಂಡುಕೊಂಡಿರುತ್ತಾಳೆ.

ಆದರೆ ಮೊಮ್ಮಕ್ಕಳ ಸಮಯ ಬಂದಾಗ ಆಕೆ ಪ್ರಭುದ್ಧ ಗೃಹಿಣಿ ಮಾಗಿದ ತಾಯಿ, ಅನುಭವಸ್ಥ ಪಾಲಕಿ. ವಯೋಸಹಜವಾಗಿ ಕೆಲವು ಸಾಂಸಾರಿಕ ಜವಾಬ್ದಾರಿಗಳಿಂದ ನಿವೃತ್ತಿ ಪಡೆದಿರುವ ಆಕೆಗೆ ಇದೀಗ ಯಥೇಚ್ಛ ಸಮಯವಿರುತ್ತದೆ.. ಅನುಭವಗಳಿಂದ ಪಕ್ವವಾದ ಆಕೆ ಮಾನಸಿಕವಾಗಿ, ದೈಹಿಕವಾಗಿ ಪ್ರಬುದ್ಧಳಾಗಿದ್ದರೂ ಭಾವನಾತ್ಮಕವಾಗಿ ಮಗುವಿನಂತಹ ಮನಸ್ಥಿತಿಯನ್ನು ಹೊಂದಿರುತ್ತಾಳೆ.

ಈ ಸಮಯದಲ್ಲಿ ಆಕೆ ಮೊಮ್ಮಕ್ಕಳನ್ನು ಎತ್ತಿ ಆಡಿಸುವುದೆಂದರೆ ಬದುಕಿನಲ್ಲಿ ಎರಡೆರಡು ಬಾರಿ ಮಡಿಲು ತುಂಬಿದಂತೆ. ಒಂದು ಬಾರಿ ತಮ್ಮ ಮಕ್ಕಳನ್ನು ಪ್ರೀತಿಸುವ ಮತ್ತೊಮ್ಮೆ ಅವರ ಮಕ್ಕಳನ್ನು ಪ್ರೀತಿಸುವ ಎರಡೆರಡು ಬಗೆಯ ತಾಯ್ತನಗಳಿಂದ ಆಕೆ ಮತ್ತಷ್ಟು ಪ್ರೀತಿ, ವಿಶ್ವಾಸ ಮತ್ತು ಅನುಭವಗಳ ಭಾವನಾತ್ಮಕ ಶ್ರೀಮಂತಿಕೆಯನ್ನು ಗಳಿಸುತ್ತಾಳೆ

ತನ್ನ ಮೊಮ್ಮಗುವನ್ನು ಜೋಳಿಗೆಯಲ್ಲಿ ಹಾಕಿ ತೂಗುವಾಗ ಆಕೆ ಪ್ರತಿ ದಿನ ಹೊಸದೆಂಬಂತೆ ತನ್ನ ಮಗುವನ್ನು ಜೋಳಿಗೆಯಲ್ಲಿ ಹಾಕಿದಾಗ ಅವರು ಮಾಡುತ್ತಿದ್ದುದನ್ನು ಹೇಳುತ್ತಾಳೆ. ಮೊಮ್ಮಗುವಿನ ಆಟ ಪಾಠಗಳನ್ನು ನೋಡುತ್ತಾ ತನ್ನ ಮಕ್ಕಳ ಆಟ ಪಾಠಗಳಿಗೆ ಹೋಲಿಸಿ ನೆನಪುಗಳನ್ನು ತಾಜಾ ಮಾಡಿಕೊಳ್ಳುವ ಮೂಲಕ ಮರಳಿ ತನ್ನ ಯೌವನದ ಆ ದಿನಗಳನ್ನು ಕಾಣುತ್ತಾಳೆ. ಆಕೆಯ ಮನಸ್ಸು ಮುದಗೊಳ್ಳುತ್ತದೆ, ಚೇತೋಹಾರಿಯಾಗುತ್ತಾಳೆ.

ಗಾಳಿಗೆ ಇಟ್ಟಾಗ ಪುಸ್ತಕದ ಪುಟಗಳು ಒಂದೇ ಸಮನೆ ಹೊರಳುವಂತೆ ವರ್ಷಗಳು ಉರುಳಿ ಹೋಗುವುದನ್ನು ಆಕೆ ಕಂಡಿದ್ದಾಳೆ. ಇದೀಗ ಜೀವನದ ಸಂಧ್ಯಾಕಾಲದಲ್ಲಿ ತನ್ನ ಮೊಮ್ಮಕ್ಕಳನ್ನು ಎತ್ತಿ ಆಡಿಸುವಾಗ ಆಕೆಗೆ ಸಮಯ ಎಷ್ಟು ಬೇಗ ಸರಿದು ಹೋಯಿತು ಎಂಬುದರ ಅನುಭವವಾಗುತ್ತದೆ. ಮೊಮ್ಮಗುವನ್ನು ತನ್ನ ಎದೆಗಪ್ಪಿಕೊಂಡು ಲಾಲಿ ಹಾಡಿ ಮಲಗಿಸುತ್ತಿದ್ದರೆ ಕಾಲ ತಟಸ್ಥವಾಗಿದೆ ಎಂಬಂತೆ ಆಕೆಗೆ ಭಾಸವಾಗುತ್ತದೆ. ತೃಪ್ತಿ, ಶಾಂತಿ, ಸಮಾಧಾನಗಳು ಆಕೆಯ ಮುಖದಲ್ಲಿ ಪ್ರತಿ ಬಿಂಬಿಸುತ್ತವೆ. ಆಕೆ ಮತ್ತೆ ಪುಟ್ಟ ಮಗುವಿನಂತಾಗುತ್ತಾಳೆ. ತನ್ನ ಮಾತನ್ನು, ಮಗುವಿನ ಮಾತನ್ನು ತಾನೇ ಕಲ್ಪಿಸಿ ಕೊಂಡು ಮಾತನಾಡು ತ್ತಾ ತನ್ನ ಮತ್ತು ಮಗುವಿನ ನಡುವಿನ ಸಂಭಾಷಣೆಯನ್ನು ಜಾರಿಯಲ್ಲಿರುತ್ತಾಳೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ
Scan For Digital Colourful
HAMPI TIMES E-paper

ಈ ಹಿಂದೆ ತನ್ನ ಮಕ್ಕಳು ಆರೋಗ್ಯ ಕೆಟ್ಟಾಗ, ಕಿರುಚಿ ದಾಗ, ಬಿದ್ದು ಪೆಟ್ಟು ಮಾಡಿ ಕೊಂಡಾಗ ಗಾಬರಿ ಆತಂಕ ಗಳಿಗೆ ಈಡಾಗುತ್ತಿದ್ದ ಆಕೆ ತನ್ನ ಮೊಮ್ಮಕ್ಕಳ ಅಳು ಚೀರಾಟಗಳಿಗೆ ಕಾರಣವನ್ನು ಅರಿತು ತನ್ನ ಮಕ್ಕಳಿಗೆ ಬಾಲ್ಯದಲ್ಲಿ ಮಕ್ಕಳಿಗೆ ಇದೆಲ್ಲ ಸಹಜ ಎಂದು ಸಮಾಧಾನ ಮಾಡುವ ಮತ್ತು ಅದೇ ಸಮಯದಲ್ಲಿ ಮೊಮ್ಮಗುವಿಗೆ ಅವಶ್ಯಕವಾದ ಮತ್ತು ಅತ್ಯಗತ್ಯವಾದ ಸಾಂತ್ವನವನ್ನು ನೀಡುವ ಅಜ್ಜಿ ಮಮತೆಯ ಖನಿಯಾಗುತ್ತಾಳೆ.

ಮಗು ತನ್ನನ್ನು ಕರೆಯುವುದು ಅಜ್ಜಿ ಎಂದು ಆಕೆಗೆ ಗೊತ್ತು, ಆದರೂ ಕೂಡ ಪ್ರತಿ ಬಾರಿ ಮಗು ತನ್ನನ್ನು ಅಜ್ಜಿ ಎಂದು ಕರೆದಾಗ ಮಂಜುಳ ನಿನಾದದಂತೆ ಆಕೆಗೆ ತೋರುತ್ತದೆ, ದೇವರ ಗಂಟೆ ಬಾರಿಸಿದ ನಂತರದ ನಾದ ವಾತಾವರಣದಲ್ಲಿ ಮೂಡಿಸುವ ಸುಂದರ ಶಬ್ದ ತರಂಗವನ್ನು ಆಕೆ ಪ್ರತಿ ಬಾರಿಯೂ ಅನುಭವಿಸುತ್ತಾಳೆ ಮತ್ತು ಪುಲಕಗೊಳ್ಳುತ್ತಾಳೆ. ತನ್ನೆಲ್ಲ ಕೆಲಸ ಕಾರ್ಯಗಳನ್ನು ಹಿಂದಿಕ್ಕಿ ಮಗುವಿನ ಆದ್ಯತೆಗಳಿಗೆ ಓಗೊಡುತ್ತಾಳೆ.

ಇದೀಗ ಆಕೆ ಈ ಹಿಂದಿನಂತೆ ತನ್ನ ಕನಸುಗಳ ಹಿಂದೆ ಓಡುವುದಿಲ್ಲ, ತನ್ನ ವೈಯಕ್ತಿಕ ಕೆಲಸಗಳನ್ನು ಬದಿಗೊತ್ತುವ ಆಕೆಯನ್ನು ಕರ್ತವ್ಯ ಕೂಡ ಈ ಮುಂಚಿನಂತೆ ಕರೆಯುವುದಿಲ್ಲ. ತನ್ನ ದೈಹಿಕ ಇತಿಮಿತಿ ಗಳನ್ನು ಮರೆತು, ಮೊಣಕಾಲು ನೋವನ್ನು ಹತ್ತಿಕ್ಕಿ ಮೊಮ್ಮಕ್ಕಳ ಪುಟ್ಟ ಪಾದಗಳನ್ನು ಆಕೆ ಹಿಂಬಾಲಿಸುತ್ತಾಳೆ. ಮೊಮ್ಮಕ್ಕಳ ಹಿಂದೆ ಹಿಂದೆ ಓಡಾಡುತ್ತಾ ಅವರ ಎಲ್ಲ ಕೆಲಸಗಳನ್ನು ಮಾಡಿಕೊಡುವುದರಲ್ಲಿ ಸಂತಸವನ್ನು ಕಾಣುತ್ತಾಳೆ. ಮಗುವಿನ ಪುಟ್ಟ ಪುಟ್ಟ ತೊದಲು ಮಾತುಗಳಲ್ಲಿ ಹಿರಿದಾದ ಅರ್ಥವನ್ನು ಕಲ್ಪಿಸಿಕೊಂಡು ಸಂತಸ ಪಡುತ್ತಾಳೆ. ಅದನ್ನು ಮತ್ತೆ ಮತ್ತೆ ಮನೆಯ ಎಲ್ಲ ಜನರಿಗೆ ಹೇಳಿ ಮತ್ತೊಮ್ಮೆ ಖುಷಿ ಪಡುತ್ತಾಳೆ ಮಗುವಿನೊಂದಿಗೆ ಮತ್ತೊಮ್ಮೆ ತಾನು ಮಗುವಾಗಿ ಬಿಡುತ್ತಾಳೆ. ಮುಂಜಾನೆ ಎದ್ದ ಗಳಿಗೆಯಿಂದ ರಾತ್ರಿ ಮಲಗುವವರೆಗೆ ಆ ಮನೆಯಲ್ಲಿ ಮಗುವಿನದೇ ಮಾತು, ಆಟ ಪಾಠ ಮತ್ತು ಮಗುವಿನ ಕುರಿತಾದ ಮಾತು ಇವುಗಳದ್ದೇ ಕಾರುಬಾರು ಅಜ್ಜಿಯ ಬಾಯಲ್ಲಿ ಪದೇ ಪದೇ ಕೇಳಿ ಎಲ್ಲರಿಗೂ ಅದು ಬಾಯಿಪಾಠವಾಗುತ್ತದೆ. ಮನೆಯ ಉಳಿದ ಸದಸ್ಯರೇನೂ ಕಮ್ಮಿ ಇಲ್ಲ, ಅವರು ಕೂಡ ಅಜ್ಜಿಗೆ ಈ ವಿಷಯದಲ್ಲಿ ಜೊತೆಗೂಡುತ್ತಾರೆ.

ಮಗುವಿಗೆ ಹೇಳಲೆಂದೇ ನೂರಾರು ಕಥೆಗಳನ್ನು ನೆನಪಿಸಿ ಕೊಳ್ಳುತ್ತಾಳೆ. ಮಂತ್ರ ಶ್ಲೋಕ ವಚನಗಳನ್ನು ಬಾಯಿಪಾಠ ಮಾಡಿ ಮಗುವಿಗೆ ಕಲಿಸುತ್ತಾಳೆ. ತನ್ನ ತೊದಲು ನುಡಿಯಲ್ಲಿ ಮಗು ಅವುಗಳನ್ನು ಪುನರುಚ್ಚರಿಸಿದಾಗ ಸಂತಸದಿಂದ ಚಪ್ಪಾಳೆ ತಟ್ಟುತ್ತಾಳೆ. ತನ್ನ ಮಕ್ಕಳನ್ನು ಬೆಳೆಸುವಾಗ ತನಗೆ ದೊರೆಯದೆ ಇದ್ದ ವಿರಾಮ ಸಮಯವನ್ನು ಇಂದು ಆಕೆ ದಂಡಿಯಾಗಿ ಅನುಭವಿಸುತ್ತಿದ್ದಾಳೆ. ಮಗುವಿನ ಪುಟ್ಟ ಪುಟ್ಟ ಕೈಗಳಿಂದ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿಸುವ ಯೋಜನೆಗಳು ಆಕೆಯದ್ದು. ತನ್ನ ಮಕ್ಕಳಿಂದ ಅಸಾಧ್ಯವಾದದ್ದನ್ನು ಮೊಮ್ಮಕ್ಕಳು ಸಾಧಿಸಲಿ ಎಂಬ ಹೆಬ್ಬಯಕೆ ಆಕೆಗೆ.

ಪ್ರೀತಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ ಎಂಬುದರ ಅರಿವು ಆಕೆಗಿದೆ. ತನ್ನ ಮಕ್ಕಳೊಂದಿಗೆ ತೋರುತ್ತಿದ್ದ ಸಿಟ್ಟು ಸೆಡವುಗಳನ್ನು ಇಂದು ಆಕೆ ಹಿಂದೆ ತಳ್ಳಿದ್ದು ಮೊಮ್ಮಕ್ಕಳನ್ನು ಸಾಧ್ಯವಾದಷ್ಟು ಪ್ರೀತಿ ವಿಶ್ವಾಸದಿಂದ ಅನುನಯಿಸುತ್ತಾಳೆ. ತಮ್ಮ ತಂದೆ ತಾಯಿಯ ಬಳಿ ಹಠ ಮಾಡುವ ಮಕ್ಕಳು ಕೂಡ ಅಜ್ಜಿಯ ಮಾತನ್ನು ಕೇಳುತ್ತಾರೆ... ಕಾರಣ ಇಷ್ಟೇ ತಂದೆ ತಾಯಿಗಳು ಹೇಳಿದ ವಿಷಯವನ್ನೇ ಮೆದುವಾದ ಕಣಕದ ಒಳಗೆ ಹೂರಣವನ್ನು ನಯವಾಗಿ ತುಂಬುವಂತೆ ಅಜ್ಜಿ ಮೊಮ್ಮಕ್ಕಳಿಗೆ ಪ್ರೀತಿಯಿಂದ ಮನದಟ್ಟು ಮಾಡಿಸುತ್ತಾಳೆ. ತಾಯಿಯಾಗಿ ತಾನು ಮಾಡಲಾಗದ ಮಕ್ಕಳ ಅನುನಯಿಸುವಿಕೆಯಲ್ಲಿ ಅಜ್ಜಿಯಾಗಿ ಆಕೆ ಯಶಸ್ವಿಯಾಗಿದ್ದಾಳೆ.

ಈ ಹಿಂದೆ ಆಕೆಗೆ ತನಗೆ ಎಲ್ಲವೂ ತಿಳಿದಿದೆ ತಾನು ಜಾಣೆ ಎಂಬ ಭಾವವಿತ್ತು. ಆದರೆ ನಿಜ ಹೇಳಬೇಕೆಂದರೆ ಆಕೆ ಇದೀಗ ತನ್ನ ಮೊಮ್ಮಕ್ಕಳೊಂದಿಗೆ ಹೊಸತಾಗಿ ಎಲ್ಲವನ್ನು ಕಲಿಯುತ್ತಿದ್ದಾಳೆ. ಮೊಮ್ಮಕ್ಕಳದೇ ಆದ ಗ್ರಹಿಕೆಯಲ್ಲಿ ವಿಚಾರಗಳು ಆಕೆಗೆ ಹೊಸದರಂತೆ ಭಾಸವಾಗುತ್ತಿವೆ. ಮೊಮ್ಮಕ್ಕಳ ದೃಷ್ಟಿಕೋನದ ವಿಚಾರಗಳು ಆಕೆಯನ್ನು ಹೊಸ ಮನುಷ್ಯಳನ್ನಾಗಿಸಿವೆ, ಆಕೆಯ ಹೃದಯ ಈಗ ಮುಂಚಿನಿಂದಲೂ ವಿಶಾಲವಾಗಿದೆ, ಪ್ರೀತಿ ಪ್ರೇಮ ವಿಶ್ವಾಸಗಳ ಗಣಿಯಾಗಿದೆ ಸಿಟ್ಟು ಸೆಡವುಗಳಿಗೆ ಅಲ್ಲಿ ಯಾವುದೇ ಅವಕಾಶವಿಲ್ಲದಂತಾಗಿದೆ.

ಈ ಮೊದಲು ಗಂಡ ಮಕ್ಕಳ ಸಂತಸದಲ್ಲಿಯೇ ತನ್ನ ಸಂತಸವನ್ನು ಕಾಣುತ್ತಿದ್ದ ಆಕೆ ಇದೀಗ ಮೊಮ್ಮಕ್ಕಳ ಕಣ್ಣಲ್ಲಿ ಜಿನುಗುವ ಉತ್ಸಾಹ ಮತ್ತು ಸಂತಸಗಳನ್ನು ಕಂಡು ಖುಷಿಪಡುತ್ತಾಳೆ.. ಮೊಮ್ಮಕ್ಕಳ ಅತಿ ಸಣ್ಣ ಯಶಸ್ಸು ಕೂಡ ಆಕೆಯ ಕಣ್ಣಲ್ಲಿ ಆನಂದ ಭಾಷ್ಪವನ್ನು ತರಿಸುತ್ತದೆ.



ಮೊಮ್ಮಕ್ಕಳಿಗೆ ಉಂಟಾಗುವ ಅತಿ ಚಿಕ್ಕ ನೋವು ಕೂಡ ಆಕೆಗೆ ಆತಂಕವನ್ನು, ಭಯವನ್ನು ಉಂಟುಮಾಡುತ್ತದೆ. ಈ ನಿಟ್ಟಿನಲ್ಲಿ ಮಕ್ಕಳು ಅದೆಷ್ಟೇ ಗೇಲಿ ಮಾಡಿದರೂ ಆಕೆ ಬದಲಾಗಳು.

"ಅಸಲಿಗಿಂತ ಬಡ್ಡಿಯ ಮೇಲೆ ಪ್ರೀತಿ ಜಾಸ್ತಿ" ಎನ್ನುವ ಹಾಗೆ ತನ್ನ ಮಕ್ಕಳನ್ನು ಪ್ರೀತಿಸುವ ತಾಯಿ ಅದಕ್ಕಿಂತಲೂ ಹೆಚ್ಚು ತನ್ನ ಮೊಮ್ಮಕ್ಕಳನ್ನು ಪ್ರೀತಿಸುತ್ತಾಳೆ. ಆದರೆ ತನ್ನ ಮಕ್ಕಳಿಗೆ ಮೊಮ್ಮಕ್ಕಳ ಲಾಲನೆ ಪಾಲನೆಯಲ್ಲಿ ಉಂಟಾಗುವ ತೊಂದರೆಯನ್ನು ಕೂಡ ಆಕೆ ಸಹಿಸಲಾರಳು. ಮಕ್ಕಳು ಮತ್ತು ಮೊಮ್ಮಕ್ಕಳ ಆರೈಕೆಯಲ್ಲಿ ತಾನು ಸೋತು ಹೋದರೂ ಚಿಂತಿಸಳು ಆಕೆ.

ಕಾಲ ಬದಲಾಗಿದೆ... ಎಲ್ಲವೂ ಬದಲಾಗಿದೆ ನಿಜ. ಆದರೆ ಮೊಮ್ಮಕ್ಕಳ ಮೇಲಿನ ಅಜ್ಜಿಯ ಪ್ರೀತಿಯಲ್ಲಿ ಮಾತ್ರ ಕೊಂಚವೂ ಕಡಿಮೆಯಾಗಿಲ್ಲ. ಇದೀಗ ಅಜ್ಜಿಯರು ತಮ್ಮ ವೈಯುಕ್ತಿಕ ಸಮಯವನ್ನು ಕೂಡ ಆಸ್ತೆಯಿಂದ ಅನುಭವಿಸುತ್ತಲೇ ಮೊಮ್ಮಕ್ಕಳನ್ನು ಕೂಡ ಬೆಳೆಸುತ್ತಾರೆ.

ಮತ್ತೆ ಕೆಲವೊಮ್ಮೆ ಮೊಮ್ಮಕ್ಕಳ ಪಾಲನೆಯ ಕೆಲಸ ವಯೋ ಸಹಜವಾಗಿ ಅವರಿಗೆ ಹೊರೆಯಾಗಬಹುದಾದ ಸಾಧ್ಯತೆಗಳು ಕೂಡ ಇವೆ. ಕೆಲ ಹೆಣ್ಣು ಮಕ್ಕಳು ತಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಯಾಗುತ್ತಾರೆ ಎಂದು ರಜೆ ಬಿಟ್ಟೊಡನೆ ತಮ್ಮ ಮಕ್ಕಳನ್ನು ತಮ್ಮ ತಂದೆ ತಾಯಿಯರ ಬಳಿ ಬಿಟ್ಟು ತಾವು ಹೊರಟುಬಿಡುತ್ತಾರೆ. ಮಕ್ಕಳ ಊಟ, ತಿಂಡಿ, ನಿದ್ರೆ, ನೀರಡಿಕೆಗಳ ಸಂಪೂರ್ಣ ಜವಾಬ್ದಾರಿ ಅಜ್ಜಿಯರ ಮೇಲೆ ಬಿದ್ದಾಗ ಅವರು ಸಹಜವಾಗಿ ದಣಿಯುತ್ತಾರೆ . ಬೇಸರಪಟ್ಟುಕೊಳ್ಳುತ್ತಾರೆ ಮೇಲಾಗಿ ತಮ್ಮನ್ನು ಬಳಸಿಕೊಳ್ಳಲಾಗುತ್ತಿದೆ ಎಂದಾದಾಗ ನೋಯುತ್ತಾರೆ.

ಇದನ್ನು ಅವರ ಮಕ್ಕಳು ಪ್ರಜ್ಞಾಪೂರ್ವಕವಾಗಿ ಗಮನಿಸಿ ತಮ್ಮ ಪಾಲಕರಿಗೆ ವೈಯುಕ್ತಿಕ ಸಮಯವನ್ನು ಕಳೆಯಲು ಅವಕಾಶ ಮಾಡಿಕೊಡಬೇಕು. ಅದು ಅವರ ಜವಾಬ್ದಾರಿಯೂ ಹೌದು.

ತಮ್ಮ ಮಕ್ಕಳು ತಮ್ಮ ಜವಾಬ್ದಾರಿಯೇ ಹೊರತು ತಮ್ಮ ಪಾಲಕರ ಪಾಲಿನ ಹೊರೆ ಅಲ್ಲ ಎಂಬುದನ್ನು ಅರಿತು ಮಕ್ಕಳ ಪಾಲಿಗೆ ಅಜ್ಜಿಯಂದಿರನ್ನು ಆಯಾಗಳಾಗಿ ಭಾವಿಸದೆ ಅವರನ್ನು ಮಾನಸಿಕ ಇಬ್ಬಂದಿತನಕ್ಕೆ ಈಡು ಮಾಡದೆ ಅಜ್ಜಿಯಂದಿರಿಗೆ ಉಪಕರಿಸಬೇಕು. ಅಜ್ಜಿಯ ಪ್ರೀತಿ ವಿಶ್ವಾಸ ಹಾರೈಕೆಯಲ್ಲಿ ಮೊಮ್ಮಕ್ಕಳು ಅರಳಲಿ. ಏನಂತೀರಾ ಸ್ನೇಹಿತರೆ?

# ಶಂತನು

ಮಹಾಭಾರತದ ಪಾತ್ರ ಪ್ರಪಂಚವು ನಮಗೆ ಬೇರೆಯದೇ ಲೋಕವನ್ನು ತೆರೆದಿಡುತ್ತದೆ. ವ್ಯಾಸ ಮಹರ್ಷಿ ವಿರಚಿತ ಮಹಾಭಾರತ ಸ್ಥೂಲವಾಗಿ ದಾಯಾದಿಗಳ ಕಲಹ ಎಂದೋ , ಅವತಾರಿ ಕೃಷ್ಣನ ಲೀಲಾ ವಿನೋದ ಎಂದೋ ಬಣ್ಣಿಸಲ್ಪಟ್ಟರೂ , ವಾಸ್ತವದ ಭೂತ ಕನ್ನಡಿಯಲ್ಲಿ ನೋಡಿದಾಗ , ಆ ಪಾತ್ರಗಳ ಸನ್ನಿವೇಶ ಅವರ ವ್ಯಕ್ತಿತ್ವ, ಅದರ ವ್ಯಾಪ್ತಿ ಹಾಗೂ ಅದರ ವಿಸ್ತಾರ ಅಷ್ಟೇ ಅಲ್ಲದೆ ಅದರ ಸೀಮಿತ ದೃಷ್ಟಿ ಹೀಗೆ ವಿಮರ್ಶೆಗೆ ಇಳಿದರೆ ಆಳ ಕಡಲಿನ ನೆಲ ಹುಡುಕಿದಂತೆ , ಬಗೆದಷ್ಟೂ ಮೊಗೆದಷ್ಟೂ ಮುಗಿಯದ ಭಾವ ಜೀವ ಸೆಲೆ. ಈ ನೆಲೆಯಲ್ಲಿ ಮಾನುಷ ಭಾವದಲ್ಲಿ ನೋಡಿದಾಗ ಇಲ್ಲಿ ಮೂಡಿರುವ ರಸ ಭಾವಗಳು , ಮನೋ ವಿಕಾರಗಳು ಅಲ್ಲದೆ ಮಾನವತೆಯ ನೆಲೆಯನ್ನೂ ಮೀರಿ ದೈವತ್ವಕ್ಕೆ ನಿಲುಕವ ಕಾರ್ಯ ಪ್ರವೃತ್ತಿ ಒಟ್ಟಿನಲ್ಲಿ ಮಹಾಭಾರತದಲ್ಲಿ ಇಲ್ಲದೆ ಇರುವ ವಸ್ತುವೇ ಇಲ್ಲ . ಅದನ್ನು ಅರಿಯಲು ನಮ್ಮ ಬುದ್ಧಿ ಸೀಮಿತ, ಆಯಸ್ಸು ಸಾಲದಷ್ಟೇ ಎನ್ನಬಹುದು .



ಚೇತನ ಭಾರ್ಗವ
ಅರಮನೆತೋಟ
Scan For Digital Colourful
HAMPI TIMES E-paper

ಒಬ್ಬ ತಂದೆಯ ದೃಷ್ಟಿಯಲ್ಲಿ ಅವಲೋಕಿಸಿದಾಗ ನನಗೆ ಅಚ್ಚರಿಗೊಳಿಸುವ ಪಾತ್ರ ಎಂದರೆ ಶಂತನು ಮಹಾರಾಜನದು. ಹಲವು ಬಗೆಯಲ್ಲಿ ಮುಂದಿನ ಮಹಾಭಾರತಕ್ಕೆ ಅದರ ಹಲವಾರು ಘಟನೆಗಳಿಗೆ ಈತನ ಪ್ರಭಾವವೂ ಇದೆ ಎಂದರೆ ತಪ್ಪಾಗಲಾರದು. ಕಾರ್ಯಾಕಾರಣ ನಿಮಿತ್ತದಂತೆಯೇ ನಡೆಯುವ ಘಟನೆಗಳಿಗೆಬಂಧಿಯಾದರೂ ಶಂತನು ಒಬ್ಬ ತಂದೆಯಾಗಿ ತನ್ನ ಕಾಮನೆಗಳನ್ನು ಹತ್ತಿಕ್ಕಲಾಗದೆ ಮೋಹವ್ಯಸನನಾಗಿ ಮಗನಾದ ದೇವವ್ರತನ ಬಗ್ಗೆ ಯೋಚನೆಗೊಳಗಾಗುವ ಅಸಹಾಯಕತೆಯನ್ನು ಅರಿಯಲು ಸುಲಭ ಸಾಧ್ಯವಿಲ್ಲ.

ಮೊದಲು ಗಂಗೆಯನ್ನು ಮೋಹಿಸಿ ಆಕೆ ಹುಟ್ಟಿದ ಮೊದಲು ಏಳು ಪುತ್ರರನ್ನು ನದಿಯಲ್ಲಿ ಮುಳುಗಿಸಿದಾಗ ತಂದೆಯಾಗಿ ಆತನ ಭಾವ ತೀವ್ರತೆ , ತಾನು ಕೊಟ್ಟ ಮಾತಿಗೆ ತಪ್ಪದೆ ಗಂಗೆಯನ್ನು ಪ್ರಶ್ನೆ ಮಾಡದ ವಿಹ್ವಲತೆ ಎಂತವರಿಗೂ ಕಷ್ಟ ಸಾಧ್ಯ . ಶಾಪದ ಕಾರಣದಿಂದ ಅಷ್ಟ ವಸುಗಳು ಭೂಮಿಯಲ್ಲಿ ಜನಿಸುವ ಆ ಮೂಲಕ ತಮ್ಮ ಪಾಪ ಕಳೆದುಕೊಳ್ಳಲು ಗಂಗೆ ನದಿಗೆ ತಳ್ಳುವ ಪ್ರಕ್ರಿಯೆ ಕಾರ್ಯಾ ಕಾರಣವೇ ಇದ್ದರೂ ಆಕೆಯ ಕಾರ್ಯಕ್ಕೆ ಅಡ್ಡಿ ಬರುವುದಿಲ್ಲ ಎಂಬ ವಚನ ಬದ್ಧತೆ ತಂದೆಯಾಗಿ ಹುಟ್ಟಿದ ಮಗುವನ್ನು ಎತ್ತಿಕೊಳ್ಳಲೂ ಆಗದೆ ನದಿಗೆ ತಳ್ಳುವ ಗಂಗೆಯನ್ನು ನೋಡಿ ಕೊನೆಗೆ 8 ನೇ ಮಗುವೂ ನದಿ ಪಾಲಾಗುವಷ್ಟರಲ್ಲಿ ವಚನ ಮುರಿದು ಗಂಗೆಯೂ ಅವನನ್ನು ತೊರೆದು , ದೇವವ್ರತ ಶಂತನುವಿನ ಪಾಲಿಗೆ ಉಳಿದಾಗ ಕೊಂಚ ನೆಮ್ಮದಿ ಕಾಣುವ ಆತನ ಪಾತ್ರ ಅಸಹಾಯಕ ತಂದೆಯ ನೋಟವನ್ನು ಕಟ್ಟಿಕೊಡುತ್ತದೆ.

ತೇಜೋವಂತ , ಪರಾಕ್ರಮಿಯಾಗಿ ದೇವವ್ರತ ಪಟ್ಟಕ್ಕೆ ಏರುವ ಸಿದ್ಧತೆಯಲ್ಲಿದ್ದಾಗಲೇ ಶಂತನುವಿಗೆ ವಿಧಿ ಲಿಖಿತವೊ ಎಂಬಂತೆ ಸತ್ಯವತಿಯ ಮೇಲೆ ಮೋಹ ಚಿಗುರಿದ್ದು ಮಹಾಭಾರತ ಅವಿರತ ಪ್ರತಿಜ್ಞೆಗಳ ಮುನ್ನುಡಿ ಎಂತಲೇ ಹೇಳಬಹುದು. ಎದೆಯ ಮಟ್ಟಕ್ಕೆ ಬೆಳೆದ ಮಗನೆದುರು ತನ್ನ ಇಳಿವಯಸ್ಸಿನ ಮೋಹ ಬಿಚ್ಚಿಡಲಾಗದೆ ಅತ್ತ ಸತ್ಯವತಿಯನ್ನು ಮರೆಯಲೂ ಆಗದೆ ಪಡುವ ಪಾಡು ವಿಚಿತ್ರ ಎನಿಸಿದರೂ ಮಾನವ ಸಹಜ .ತಾನು ರಾಜನಾದರೂ ಸತ್ಯವತಿಯ ತಂದೆಯ ಮಾತಿನಂತೆ ಆಕೆಯ ಹೊಟ್ಟೆಯಲ್ಲಿಯೇ ಹುಟ್ಟಿದ ಮಕ್ಕಳಿಗೆ ಪಟ್ಟ ಎಂಬ ಬೇಡಿಕೆ ಆತನನ್ನು ಒಳಗೆ ಕೊರೆದು ಟೊಳ್ಳು ಮಾಡುತ್ತಿರುವುದು ಕೊನೆಗೆ ದೇವವ್ರತನಿಗೆ ತಿಳಿಯುವುದು ಮಂತ್ರಿಯಿಂದ . ತಂದೆಯ ವ್ಯಾಮೋಹವನ್ನು ಹಂಗಿಸದೆ ಸತ್ಯವತಿಯ ತಂದೆಯೆದುರು ಹೋಗಿ ಆಕೆಯ ಒಡಲ ಮಗುವಿಗೆ ಪಟ್ಟ ಎಂದೂ , ತಾನು ಅದರ ಕಾವಲು ಎಂದೂ ಹಾಗೂ ಮುಂದೆ ಎಂದಿಗೂ ತೊಂದರೆ ಆಗದಂತೆ ತಾನು ಆ ಜನ್ಮ ಪರ್ಯಂತ ಬ್ರಹ್ಮಚಾರಿಯಾಗಿ ಉಳಿಯುವ ಪ್ರತಿಜ್ಞೆ ಮಾಡುವ ದೇವವ್ರತ ಭೀಷ್ಮ ಎನಿಸಿಕೊಂಡು ಶಂತನುವಿಗೆ ಸತ್ಯವತಿಯನ್ನು ಒಪ್ಪಿಸುತ್ತಾನೆ , ಇಚ್ಛಾಮರಣಿಯಾಗು ಎಂಬ ವರವನ್ನು ಪಡೆಯುತ್ತಾನೆ.

ಇಲ್ಲಿ ಶಂತನುವಿನ ವ್ಯಾಮೋಹ ಬಲಹೀನತೆಯಂತೆ ಕಂಡರೂ , ಮಾನವ ಸಹಜ ಪ್ರಕೃತಿಯಲ್ಲಿ ಇದು ಇಳಿ ವಯಸ್ಸಿನ ಸಾಮಾನ್ಯ ಪ್ರಕ್ರಿಯೆ. ಒಂಟಿಯಾಗಿರುವ ತನಗೆ ಸಾಂಗತ್ಯ ಬೇಕು ಎನಿಸುವುದು ತಪ್ಪಲ್ಲ ಅದು ಸಹಜ ಹಾಗೆಯೇ ಅದನ್ನು ಮೀರುವುದರ ಪಕ್ವತೆ ಸಾಧುವೆ ಆದರೂ , ಸಾಂಗತ್ಯವನ್ನು ದಕ್ಕಿಸಿಕೊಂಡು ನಿಭಾಯಿಸುವುದು ಸುಲಭವೂ ಅಲ್ಲ. ಸಮಾಜದ ಪರಿಧಿಯಲ್ಲಿ ಸದಾ ವಿಮರ್ಶೆಗೊಳಗಾಗುವ ಈ ಸಂಗತಿ ಒಂದು ಜೀವ ವೈಜ್ಞಾನಿಕ ಪ್ರಕ್ರಿಯೆ ಎಂದೆನಿಸಿದರೂ ಮಹಾಭಾರತ ಅದನ್ನು ನಮ್ಮ ಮುಂದೆ ಇಟ್ಟು ಕೌರವ ಪಾಂಡವರ ಜನನ , ಅವರ ಸ್ಪರ್ಧೆ ಹಾಗೂ ಕುರುಕ್ಷೇತ್ರದಲ್ಲಿ ಧರ್ಮ ಅಧರ್ಮದಲ್ಲಿ ಮಹಾನ್ ಪ್ರತಿಜ್ಞೆಗೈದ ಭೀಷ್ಮನನ್ನೇ ಶರಶಯ್ಯೆ ಏರುವಂತೆ ಮಾಡಿದ್ದು ಹೀಗೆ ಹಲವು ಘಟನಾವಳಿಗೆ ಕಾರಣವಾಗಿ ಯಾವುದು ಸರಿ , ಯಾವುದು ತಪ್ಪು ಎಂಬ ದ್ವಂದ್ವ ಲೋಕದಲ್ಲಿಯೇ ನಮ್ಮನ್ನು ಕಾಡಿಸುತ್ತದೆ.

ತನ್ನ ಮೋಹ ಸರಿಯೇ ತಪ್ಪೇ ಎಂದೇ ದ್ವಂದ್ವದಲ್ಲಿ ಬೇಯುವ ಶಂತನುವಿನ ಮನಸ್ಥಿತಿ ಮಾನವ ಸಹಜ ಪ್ರಕ್ರಿಯೆ , ಹಾಗೂ ಇಳಿ ವಯಸ್ಸಿನ ತಂದೆಯ ಅಸಹಾಯಕತೆ ಆಗಿದೆ. ಹಾಗೆಯೇ ಈ ದ್ವಂದ್ವಾವನ್ನು ಅನುಭವಿಸಿಯೇ ಮೀರಿ ದೈವತ್ವದ , ಅದ್ವೈತದಲ್ಲಿ ಲೀನವಾಗುವ ಗುರಿಯನ್ನೂ ಮಹಾಭಾರತ ಈ ಪಾತ್ರ ಪ್ರಪಂಚಗಳ ಮೂಲಕ ಅವತಾರಿ ಕೃಷ್ಣನ ಸಾರಥ್ಯದಲ್ಲಿ ನಮಗೆ ದರ್ಶಿಸುತ್ತದೆ . ಶಂತನು ಎಂಬ ತಂದೆಯ ಪಾತ್ರ ಅನೇಕ ಸವಾಲುಗಳನ್ನು ಹುಟ್ಟು ಹಾಕುತ್ತದೆ ಹಾಗೆಯೇ ನಮಗೆ ಅದರ ಉತ್ತರ ಕಂಡುಕೊಳ್ಳುವಂತೆಯೂ ಪ್ರೇರೇಪಿಸುತ್ತದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಕವಿ ಮನಸು

## ಹೊಟ್ಟೇ....ನಾ ಕೆಟ್ಟೆ

(ತಮಾಷೆಗಾಗಿ)



ಇಟ್ಟ ಹೆಜ್ಜೆ ಕಾಣದಂತೆ
ಹೊಟ್ಟೆ ಮುಂದೆ ಬಂದಿದೆ
ದಿಟ್ಟಿಯಿಡಲು ಪಾದದೆಡೆಗೆ
ಚಟ್ಟೆಯಾಗ ಬೇಕಿದೆ

ಬಟ್ಟೆಯಳತೆ ನಿತ್ಯ ಬದಲಿ
ಪಟ್ಟ ಪಾಡು ಅಧಿಕವೇ
ತಟ್ಟೆಯೆದುರು ಕುಳಿತರಾಗ
ಪಟ್ಟ ಕಷ್ಟ ಮರೆಯುವೆ

ಬಿಟ್ಟಿ ಸಲಹೆ ಕೊಡುವರಿಹರು
ಬಿಟ್ಟು ಬಿಡಲು ಸಾಧ್ಯವೆ?
ಇಷ್ಟವಿರದ ಪಥ್ಯವನ್ನು
ನಿಷ್ಠೆ ಯಿಂದ ಮಾಡುವೆ

ಇಷ್ಟ ತಿಂಡಿ ಮನೆಯಲಿರಲು
ನಿಷ್ಠೆ ಬದಲದಿರುವುದೆ
ಮುಷ್ಟಿ ಅನ್ನ ಉಂಡು ತೃಪ್ತಿ
ಪಟ್ಟುಕೊಳಲು ಸಾಧ್ಯವೆ?

ಅಟ್ಟದಲ್ಲಿ ಅಡಗಿಸಿಡಲಿ
ಇಷ್ಟ ಎಣ್ಣೆ ತಿಂಡಿಯ
ಕಷ್ಟ ಪಟ್ಟು ಹುಡುಕಿ ತೆಗೆವೆ
ಇಷ್ಟೂ ಬರದು ಸಂಶಯ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಯೋಜನಾಧಿಕಾರಿ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ದೇವದಾಸಿ ಪುನರ್ವಸತಿ ಯೋಜನಾ ಕಚೇರಿಯಲ್ಲಿ ಪ್ರಸ್ತಕ ಸಾಲಿಗೆ ಖಾಲಿ ಇರುವ ಯೋಜನಾಧಿಕಾರಿಗಳ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಯೋಜನಾಧಿಕಾರಿಗಳ ಒಂದು ಹುದ್ದೆಗೆ ಎಂ.ಎ., ಎಂ.ಎಸ್.ಡಬ್ಲ್ಯೂ., ಎಂ.ಎ ಇನ್ ಸೋಶಿಯಾಲಜಿ, ಎಂ.ಎಸ್ಸಿ ಇನ್ ಸೈಕಾಲಜಿ ಪದವಿ ಹೊಂದಿರಬೇಕು. ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. 65 ವರ್ಷದೊಳಗಿರುವ ನಿವೃತ್ತ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಆದ್ಯತೆ ನೀಡಲಾಗುವುದು.

ಆಸಕ್ತರು ಕಚೇರಿಯಲ್ಲಿ ಅರ್ಜಿ ಪಡೆದು ನಿಗದಿತ ವಿದ್ಯಾರ್ಹತೆಯ ದಾಖಲೆ ಹಾಗೂ ಅನುಭವದ ಮೂಲ ಪ್ರಮಾಣ ಪತ್ರಗಳೊಂದಿಗೆ ಜುಲೈ 12 ರೊಳಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ನಗರದ ಎಸ್.ಪಿ.ಸರ್ಕಲ್ ಹತ್ತಿರದ ಮಹಿಳಾ ಪೋಲಿಸ್ ಠಾಣೆ ಪಕ್ಕದಲ್ಲಿನ ಸ್ತ್ರೀ ಸೇವಾನಿಕೇತನ ಆವರಣದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿ.ಇಡಿ ತರಬೇತಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಮೈಸೂರಿನ ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳಿಗೆ ಶಿಕ್ಷಕರಾಗಲು 2 ವರ್ಷದ ವಿಶೇಷ ಡಿ.ಇಡಿ ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಗೋವಿಂದಪ್ಪ ಅವರು ತಿಳಿಸಿದ್ದಾರೆ.

ಆಸಕ್ತರು ದ್ವಿತೀಯ ಪಿ.ಯು.ಸಿ ಉತ್ತೀರ್ಣರಾಗಿರಬೇಕು. ಅಂಧ ಮತ್ತು ಶ್ರವಣ ದೋಷವುಳ್ಳ ಮಕ್ಕಳ ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೀಯ ಪುನರ್ವಸತಿ ಮಂಡಳಿಯ ಪಠ್ಯಕ್ರಮ ಹಾಗೂ ಮಾರ್ಗಸೂಚಿಯಯಂತೆ ಡಿಪ್ಲೋಮೋ ಇನ್ ಸ್ಪೇಷಲ್ ಎಜುಕೇಷನ್, ಡಿಪ್ಲೋಮೋ ಇನ್ ಸ್ಪೇಷಲ್ ಎಜುಕೇಷನ್ ತರಬೇತಿಯನ್ನು ಕನ್ನಡ ಮಾಧ್ಯಮದಲ್ಲಿ ನೀಡಲಾಗುತ್ತದೆ.

ಅರ್ಜಿ ಸಲ್ಲಿಸಲು ಜುಲೈ 12 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ದೂ.0821-2491600, ಮೊ.9113561620, 9686762378, 7829115275, 9743503262, 9611773697, 6362962400 ಅಥವಾ ಜಿಲ್ಲಾ ಅಂಗವಿಕಲರ ಕಲ್ಯಾಣಧಿಕಾರಿ ಕಛೇರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಚನ ಸಾಹಿತ್ಯ ಸಂರಕ್ಷಣೆಗೆ ಜೀವನ ಮುಡಿಪಾಗಿಟ್ಟವರು ಡಾ.ಫ.ಗು.ಹಳಕಟ್ಟಿ

### ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಹೇಳಿಕೆ



**ಹಂಪಿ ಟೈಮ್ಸ್ ಬಳ್ಳಾರಿ**

ಡಾ.ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರು ವಚನ ಸಾಹಿತ್ಯ ಸಂರಕ್ಷಣೆಯಲ್ಲಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ. ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯದ ಹೊಂಗಿರಣದಲ್ಲಿ ಬುಧವಾರ ಡಾ.ಫ.ಗು. ಹಳಕಟ್ಟಿಯವರ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ 'ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶರಣರ ಜೀವನ ಮೌಲ್ಯಗಳನ್ನು ಕಾಲಾತೀತವಾದ ಕಾಲಗರ್ಭದಲ್ಲಿ, ಹುದುಗಿ ಹೋಗಿದ್ದ ವಚನ ಸಾಹಿತ್ಯವನ್ನು ಶೋಧಿಸಿ, ಅನ್ವೇಷಿಸಿ ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಿ ಸಂಶೋಧನಾ ಕ್ಷೇತ್ರಕ್ಕೆ ಡಾ.ಫ.ಗು.ಹಳಕಟ್ಟಿ ಅವರು ದೊಡ್ಡ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು.

ಒಂದು ವೇಳೆ ಶರಣ ಸಾಹಿತ್ಯದ ಕಡೆಗೆ ಲಕ್ಷ್ಯ ಹರಿಸದೇ ಇದ್ದರೆ ಇಂದು ನಮಗೆ ಹಲವಾರು ಶರಣರ, ವಚನಕಾರರ ವಚನಗಳು ದೊರಕುತ್ತಿರಲಿಲ್ಲ. ಕತ್ತಲ ಕಾಲ ಗರ್ಭದಲ್ಲಿದ್ದ ವಚನಗಳನ್ನು ಒಬ್ಬ ಸಾಮಾನ್ಯ ವಕೀಲರಾಗಿದ್ದುಕೊಂಡು ಶರಣರ ತತ್ವಾದರ್ಶಗಳು ಅವರೊಳಗಿದ್ದ ವೈಚಾರಿಕ ಮಾನವ ಪ್ರಜ್ಞೆಯನ್ನು ಎತ್ತಿ ತೋರಿಸಿದ ಕೀರ್ತಿ ಡಾ.ಫ.ಗು.ಹಳಕಟ್ಟಿ ಅವರಿಗೆ ಸಲ್ಲುತ್ತದೆ ಎಂದರು.

ರಾವ್ ಬಹದ್ದೂರ್ ವೈ.ಮಹಾಬಲೇಶ್ವರಪ್ಪ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕ ಡಾ.ಎ.ತಿಮ್ಮನಗೌಡ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಡಾ.ಫ.ಗು. ಹಳಕಟ್ಟಿಯವರದು ವೈವಿಧ್ಯಮಯ ವ್ಯಕ್ತಿತ್ವ. ಶಿಕ್ಷಣ, ಸಾಹಿತ್ಯ ಮತ್ತು ಸಹಕಾರ ಕ್ಷೇತ್ರಗಳಿಂದ ಬಾಳು ಬಂಗಾರ ಎಂದು ತಿಳಿದವರು. ಕನ್ನಡ ಮತ್ತು ಕರ್ನಾಟಕ ಅವರ ಜೀವನದ ಉಸಿರಾಗಿತ್ತು ಎಂದು ಹೇಳಿದರು.

1880 ಜುಲೈ 2 ರಂದು ಜನಿಸಿದ ಡಾ.ಫ.ಗು. ಹಳಕಟ್ಟಿ ಅವರು ಧಾರವಾಡದ ಗುರುಬಸಪ್ಪ ಹಳಕಟ್ಟಿಯವರ ಪುತ್ರನಾಗಿ ತಂದೆಯ ಸಮಾಜ ಸೇವಾಸಕ್ತ ಶರಣ ಗುಣಗಳನ್ನು ಬಳುವಳಿಯಾಗಿ ಪಡೆದುಕೊಂಡು ಮದ್ರಾಸ್‌ನಲ್ಲಿ ಉನ್ನತ ಶಿಕ್ಷಣ ಪಡೆದು ವಿಜಯಪುರದಲ್ಲಿ ವಕೀಲಿ ವೃತ್ತಿ ಆರಂಭಿಸಿದರು ಎಂದು ಹೇಳಿದರು.

ಡಾ.ಫ.ಗು.ಹಳಕಟ್ಟಿಯವರು ಮನೆ, ಮಠ, ಜಗುಲಿಗಳಲ್ಲಿ ಪೂಜಿಸುತ್ತಿದ್ದ ತಾಡೋಲೆಗಳನ್ನು ಹುಡುಕಿ ತಂದು, ವಚನಗಳನ್ನು ಮುದ್ರಿಸಿದವರು. ಹಳಕಟ್ಟಿಯವರು ಸ್ವತಃ ಮೊಳೆಗಳನ್ನು ಜೋಡಿಸಿ, ಅಚ್ಚು ಹಾಕಿ, ಪೆಡಲ್ ತುಳಿದು, ಮುದ್ರಿಸಿ ಪ್ರಕಟಿಸಿದ ಸಾಹಿತ್ಯದಿಂದ 250 ವಚನಕಾರರ ವಚನಗಳನ್ನು, ಸಾಹಿತ್ಯವನ್ನು ಹೊರತಂದರು. ಆ ಮುಂಚೆ ಕೇವಲ 50 ವಚನಕಾರರ ವಚನಗಳು ಬೆಳಕು ಕಂಡಿದ್ದವು. ಇದು ವಚನ ಸಾಹಿತ್ಯಕ್ಕೆ ಅವರು ನೀಡಿದ ಅಮೋಘ ಕೊಡುಗೆ. ಹಾಗಾಗಿ ಅವರನ್ನು 'ವಚನ ಪಿತಾಮಹ' ಎಂದು ಕರೆಯಲಾಗುತ್ತದೆ ಎಂದು ತಿಳಿಸಿದರು.

ಡಾ.ಫ.ಗು.ಹಳಕಟ್ಟಿ ಅವರ ಸಾಹಿತ್ಯ ಸೇವೆ ಮೆಚ್ಚಿ 1926ರಲ್ಲಿ ಬಳ್ಳಾರಿಯಲ್ಲಿ ನಡೆದ 12ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು ಎಂದು ಈ ಸಂದರ್ಭದಲ್ಲಿ ಮೆಲುಕು ಹಾಕಿದರು.

ಕಾರ್ಯಕ್ರಮದಲ್ಲಿ ಬಳ್ಳಾರಿಯ ದೊಡ್ಡಯ್ಯ ವಿ.ಕಲ್ಲೂರು ಅವರ ತಂಡದವರು ವಚನ ಸಂಗೀತ ಪ್ರಸ್ತುತಪಡಿಸಿದರು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಉಪತಹಶೀಲ್ದಾರ ಮಹಮ್ಮದ್ ಸಾಧಿಕ್ ಭಾಷಾ, ಜಿಲ್ಲಾ ದೈಹಿಕ ಶಿಕ್ಷಕ ಕೊಟ್ರೇಶ್, ನಿವೃತ್ತ ಪಿಎಸ್‌ಐ ಹುಸೇನ್ ಸೇರಿದಂತೆ ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಬಿಜೆಪಿ ಹಗಲುಗನಸು ಕಾಣುತ್ತಿದೆ ಐದು ವರ್ಷ ನಾನೇ ಮುಖ್ಯಮಂತ್ರಿ

### ಸಿ.ಎಂ.ಸಿದ್ದರಾಮಯ್ಯ ಹೇಳಿಕೆ | ನಂದಿಬೆಟ್ಟದಲ್ಲಿ ಸಚಿವ ಸಂಪುಟ ಸಭೆ



**ಹಂಪಿ ಟೈಮ್ಸ್ ಚಿಕ್ಕಬಳ್ಳಾಪುರ:**

ಸರ್ಕಾರದಲ್ಲಿ ಅಧಿಕಾರ ಬದಲಾವಣೆ ಬಗ್ಗೆ ಬಿಜೆಪಿ ಹಗಲು ಗನಸು ಕಾಣುತ್ತಿದೆ. ಬಿಜೆಪಿಯವರು ಸುಳ್ಳನ್ನು ಮಾತ್ರ ನಂಬುತ್ತಾರೆ ಸತ್ಯವನ್ನಲ್ಲ ಸುಳ್ಳು ಹೇಳುವುದರಲ್ಲಿ ನಿಸ್ಸೀಮರಾಗಿರುವ ಬಿಜೆಪಿಯವರಿಗೆ ಸತ್ಯ ಹೇಳಿ ಗೊತ್ತೇ ಇಲ್ಲ. ಅವರು ನಂಬುತ್ತಾರೋ ಬಿಡುತ್ತಾರೆ ನಾವೆಲ್ಲಾ ಒಟ್ಟಾಗಿದ್ದೇವೆ. ನಮ್ಮ ಸರ್ಕಾರ ಬಂಡೆಯಂತೆ ಐದು ವರ್ಷ ಆಡಳಿತ ನಡೆಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಅವರು ಬುಧವಾರ ನಂದಿ ಬೆಟ್ಟದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ಬಿಜೆಪಿ ಅಧಿಕಾರದಲ್ಲಿದ್ದಾಗ ಏನು ಸಾಕ್ಷಿಗುಡ್ಡೆಯನ್ನು ಬಿಟ್ಟುಹೋಗಿದ್ದಾರೆ ಎಂದು ಪ್ರಶ್ನಿಸಿದ ಸಿಎಂ, ಅವರು ನೀರಾವರಿ, ಗ್ರಾಮೀಣಾಭಿವೃದ್ಧಿ, ಲೋಕೋಪಯೋಗಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಏನು ಮಾಡಿದ್ದಾರೆ. ಬಿಜೆಪಿ ನಾಲ್ಕು ವರ್ಷ ಅಧಿಕಾರದಲ್ಲಿತ್ತು. ಎಚ್ ಡಿ ಕುಮಾರಸ್ವಾಮಿಯವರು ಒಂದು ವರ್ಷ ಎರಡು ತಿಂಗಳು ಸಮ್ಮಿಶ್ರ ಸರ್ಕಾರದಲ್ಲಿ ಅಧಿಕಾರದಲ್ಲಿದ್ದರು. ಏನು ಮಾಡಿದ್ದಾರೆ ಎಂದು ಪ್ರಶ್ನಿಸಿ, ಏನೂ ಮಾಡದೇ ಸುಳ್ಳು ಹೇಳಿಕೊಂಡು ಜನರನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನ ಮಾಡುತ್ತಿದ್ದಾರೆ ಎಂದರು.

2 ವರ್ಷದ ಸರ್ಕಾರದ ಸಾಧನಾ ಸಮಾವೇಶದಲ್ಲಿ ಮಳೆಯಿದ್ದರೂ ಸುಮಾರು ಮೂರು ಲಕ್ಷಕ್ಕಿಂತ ಹೆಚ್ಚು ಜನ ಸೇರಿದ್ದರು. ಜನರು ಸರ್ಕಾರದ ಪರವಾಗಿ ಸುಮ್ಮನೆ ಬರುತ್ತಾರೆಯೇ ಎಂದು ಪ್ರಶ್ನಿಸಿದರು.

**ಜಾತಿಗಣತಿ: ಆನ್ ಲೈನ್ ಮೂಲಕ ಜಾತಿ ನಮೂದಿಸಬಹುದು**

ಜಾತಿ ಸಮೀಕ್ಷೆಯಲ್ಲಿ ತೊಂದರೆಗಳಾಗಿದ್ದರೆ ಆನ್ ಲೈನ್ ಮಾಡಲು ತೊಂದರೆಯಿಲ್ಲ ಎಂದು ತಿಳಿಸಿದ ಮುಖ್ಯಮಂತ್ರಿಗಳು ಯಾವುದಾದರೂ ಒಂದು ದಾರಿಯಲ್ಲಿ ಜಾತಿ ಹೇಳಿಕೊಳ್ಳಬೇಕು. ಸಮೀಕ್ಷೆ ಮಾಡುವವರು ಮನೆಗೆ ಬಂದಾಗ ಅಥವಾ ಶಿಬಿರದಲ್ಲಿ ಅಥವಾ ಯಾವುದಾದರೂ ಒಂದು ವಿಧಾನದಲ್ಲಿ ಪರಿಶಿಷ್ಟರ ಜಾತಿ/ವರ್ಗ ಹೇಳಿಕೊಳ್ಳಬೇಕು. ಸಮೀಕ್ಷೆ ಮಾಡುವವರು ಮನೆ ಮನೆಗೆ ತೆರಳುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ಕೆಲವರು ಸಾಮಾಜಿಕ ಕಳಂಕ ಇದ್ದರೆ ಆನ್ ಲೈನ್ ನಲ್ಲಿ ಜಾತಿಯ ಹೆಸರನ್ನು ದಾಖಲಿಸಬಹುದು ಎಂದರು.

**ಸಚಿವ ಸ್ಥಾನ :ವರಿಷ್ಠರಿಂದ ಅಂತಿಮ ತೀರ್ಮಾನ**

ಪ್ರಜಾಪ್ರಭುತ್ವದಲಿ ಎಲ್ಲರಿಗೂ ಸಚಿವರಾಗುವ ಅಧಿಕಾರವಿದೆ. ಸಚಿವ ಸ್ಥಾನದ ಬಗ್ಗೆ ಪಕ್ಷದ ವರಿಷ್ಠರು ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು. 142 ಜನ ನಮ್ಮ ಪಕ್ಷದವರಿದ್ದಾರೆ. 34 ಜನರನ್ನು ಮಾತ್ರ ಸಚಿವರನ್ನಾಗಿಸಬಹುದು. ಎಲ್ಲರನ್ನು ಮಾಡಲಾಗುವುದಿಲ್ಲ. ಶೇ.15% ಜನರನ್ನು ಮಾತ್ರ ಮಾಡಬಹುದು ಎಂದರು.

**ಐದು ವರ್ಷ ನಾನೇ ಮುಖ್ಯಮಂತ್ರಿ**

ನಾನೇ ಐದು ವರ್ಷ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದೇನೆ ಎಂದು ಸ್ಪಷ್ಟಪಡಿಸಿದ ಮುಖ್ಯಮಂತ್ರಿಗಳು ನವೆಂಬರ್ ನಲ್ಲಿ ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರು ಇಳಿಯಲಿದ್ದಾರೆ ಎಂಬ ಬಿಜೆಪಿ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು ಬಿಜೆಪಿ ನಮ್ಮ ಹೈ ಕಮಾಂಡ್ ಅಲ್ಲ ಎಂದರು.

ಆರ್.ಅಶೋಕ್, ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ ಹೇಳಿದೆಲ್ಲಾ ಸತ್ಯವಲ್ಲ ಎಂದರು.

**ರಾಜ್ಯದ ಎಲ್ಲಾ ಕಂದಾಯ ವಿಭಾಗಗಳಲ್ಲಿ ಸಚಿವ ಸಂಪುಟ ಸಭೆ :** ರಾಜ್ಯದ ಎಲ್ಲಾ ಕಂದಾಯ ವಿಭಾಗಗಳಲ್ಲಿ ಸಚಿವ ಸಂಪುಟ ಸಭೆ ನಡೆಸಬೇಕೆಂದು ತೀರ್ಮಾನಿಸಿ ಗುಲ್ಬರ್ಗಾ, ಮೈಸೂರು, ಬೆಂಗಳೂರು ವಿಭಾಗಗಳಲ್ಲಿ ಸಚಿವ ಸಂಪುಟ ಸಭೆ ನಡೆದಿದ್ದು, ಇನ್ನು ಕೆಲವೇ ದಿನಗಳಲ್ಲಿ ಬೆಳಗಾವಿ ಹಾಗೂ ವಿಜಯಪುರದಲ್ಲಿ ಕೂಡ ನಡೆಸಲಾಗುವುದು ಎಂದರು.

ಚಿಕ್ಕಬಳ್ಳಾಪುರದಲ್ಲಿ ಬೆಂಗಳೂರು ಕಂದಾಯ ವಿಭಾಗದ ಸಚಿವ ಸಂಪುಟ ಸಭೆ ನಡೆಸಲಾಗುತ್ತಿದೆ. ಬಜೆಟ್ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಸಣ್ಣಪುಟ್ಟ ಕೆಲಸಗಳಿದ್ದರೆ ಮಾಡಿ ಕೊಡಲಾಗುವುದು ಎಂದರು.

**ರಾಜ್ಯ ಸುಭಿಕ್ಷವಾಗಲಿ:** ರಾಜ್ಯದಲ್ಲಿ ಒಳ್ಳೆ ಮಳೆ ಬೆಳೆಯಾಗಿ , ಸಮೃದ್ಧಿಯಾಗಿ. ಜನ ಸಂತೋಷ ದಿಂದಿರಲಿ ಮಾನವೀಯ ಸಮಾಜ ನಿರ್ಮಾಣವಾಗುತ್ತ ಪ್ರಯತ್ನ ಮಾಡಲಿ ಎಂದು ಮುಖ್ಯಮಂತ್ರಿಗಳು ತಿಳಿಸಿದರು.



# ಜು.4 ರಂದು ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಮತ್ತು ವಿವಿಧ ಯೋಜನೆಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಜು.4 ರಂದು ಶುಕ್ರವಾರ, ಬೆಳಿಗ್ಗೆ 10.30ಕ್ಕೆ, ಹೋಟೆಲ್ ಮಲ್ಲಿಗೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರ್ಯಪ್ಪ.ಈ. ಡೊಂಬರಮತ್ತೂರು ತಿಳಿಸಿದ್ದಾರೆ. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಸಾರಿಗೆ ಇಲಾಖೆ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ಹಮ್ಮಿಕೊಂಡಿರುವ ಸ್ಮಾರ್ಟ್ ಕಾರ್ಡ್ ವಿತರಣೆ ಮತ್ತು ವಿವಿಧ ಯೋಜನೆಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಕಾರ್ಮಿಕ ಸಚಿವ, ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ್. ಎಸ್.ಲಾಡ್ ಉದ್ಘಾಟಿಸಲಿದ್ದಾರೆ. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರು, ಕಂಪ್ಲಿ ಶಾಸಕ ಜೆ.ಎನ್.ಗಣೇಶ ಘನ ಉಪಸ್ಥಿತಿ ವಹಿಸಲಿದ್ದಾರೆ. ಹೊಸಪೇಟೆ ಶಾಸಕ ಹೆಚ್.ಆರ್.ಗವಿಯಪ್ಪ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಬಳ್ಳಾರಿ ಲೋಕಸಭೆ ಸಂಸದ ಈ. ತುಕಾರಂ, ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ, ಹಗರಿಬೊಮ್ಮನಹಳ್ಳಿ ಶಾಸಕ ಕೆ.ನೇಮಿರಾಜ ನಾಯ್ಕ, ಕೂಡ್ಲಿಗಿ ಶಾಸಕ ಡಾ.ಶ್ರೀನಿವಾಸ್.ಎನ್.ಟಿ, ಹಡಗಲಿ ಶಾಸಕ ಎಲ್.ಕೃಷ್ಣನಾಯ್ಕ, ಹರಪನಹಳ್ಳಿ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ, ಜಗಳೂರು ಶಾಸಕ ಬಿ.ದೇವೇಂದ್ರಪ್ಪ, ವಿಧಾನ ಪರಿಷತ್ ಸದ್ಯಸರಾದ ಡಾ.ಚಂದ್ರಶೇಖರ್.ಬಿ.ಪಾಟೀಲ್, ಶಶೀಲ್.ಜಿ.ನಮೋಶಿ, ವೈ.ಎಂ.ಸತೀಶ್, ಹೊಸಪೇಟೆ ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ್.ಎನ್, ಹುಡಾ ಅಧ್ಯಕ್ಷ ಹೆಚ್.ಎನ್.ಎಫ್.ಇಮಾಮ್ ನಿಯಾಜಿ ಸೇರಿದಂತೆ ನಗರ ಮತ್ತು ಗ್ರಾಮೀಣ ಸ್ಥಳಿಯ ಸಂಸ್ಥೆಗಳ ಸದ್ಯಸರುಗಳು ಆಗಮಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಕಾರ್ಮಿಕ ಇಲಾಖೆ ಕಾರ್ಯದರ್ಶಿ ರೋಹಿಣಿ ಸಿಂಧೂರಿ ದಾಸರಿ, ಸಾರಿಗೆ ಇಲಾಖೆ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು.ಬಿ.ಎಲ್, ಜಿ.ಪಂ ಸಿಇಓ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ ಷಾ, ಕಾರ್ಮಿಕ ಇಲಾಖೆ ಜಂಟಿ ಆಯುಕ್ತ, ಜಂಟಿ ಕಾರ್ಯದರ್ಶಿ ಡಾ.ಎಸ್.ಬಿ.ರವಿಕುಮಾರ, ಕಲಬುರಗಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತ ಡಾ.ವೆಂಕಟೇಶ ಶಿಂದಿಹಟ್ಟಿ, ಬಳ್ಳಾರಿ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತ ಡಾ.ಅವಿನಾಶ ನಾಯ್ಕ ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರ್ಯಪ್ಪ.ಈ. ಡೊಂಬರಮತ್ತೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತೋಟಗಾರಿಕಾ ಬೆಳೆಗಳಿಗೆ ವಿಮಾ ನೊಂದಾಯಿಸಲು ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

2025-26ನೇಸಾಲಿನಮುಂಗಾರುಹಂಗಾಮಿನಲ್ಲಿಮರುವಿನ್ಯಾಸಗೊಳಿಸಿದ ಹವಾಮಾನಆಧಾರಿತಬೆಳೆವಿಮಾಯೋಜನೆಯನ್ನುಅನುಷ್ಠಾನಗೊಳಿಸಲು ಅಗ್ರಿಕಲ್ಚರ್ ಇನ್ಸುರೆನ್ಸ್ ಕಂಪನಿಯನ್ನು ಜಿಲ್ಲೆಯಲ್ಲಿ ಆಯ್ಕೆ ಮಾಡಲಾಗಿದ್ದು, ತೋಟಗಾರಿಕೆ ಬೆಳೆಗಾರರು ತಮ್ಮ ಬೆಳೆಗಳಿಗೆ ವಿಮೆ ನೊಂದಾಯಿಸಿಕೊಳ್ಳಲು ಗ್ರಾಮ ಓನ್ ಮತ್ತು ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಜುಲೈ 31ರೊಳಗೆ ಅರ್ಜಿಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಕೆ.ಎಮ್.ರಮೇಶ ತಿಳಿಸಿದ್ದಾರೆ.

ತೋಟಗಾರಿಕೆ ಬೆಳೆಗಳಾದ ದಾಳಿಂಬೆ ಹಾಗೂ ಹಸಿ ಮೆಣಿಸಿನಕಾಯಿ ಬೆಳೆಗಳಿಗೆ ಬೆಳೆ ವಿಮೆ ಮಾಡಿಸಬಹುದಾಗಿದೆ. ವಿಮಾ ಮೊತ್ತ ಮತ್ತು ರೈತರ ವಿಮಾ ಕಂತಿನ ವಿವರ : ಪ್ರತಿ ಹೆಕ್ಟೇರ್‌ಗೆ ದಾಳಿಂಬೆ ವಿಮಾ ಮೊತ್ತ ರೂ.1,27,000 ರೈತರ ವಿಮಾ ಕಂತು ಶೇ.5 ರಂತೆ 6,350 ಹಾಗೂ ಹಸಿ ಮೆಣಸಿನಕಾಯಿ ಬೆಳೆ ವಿಮಾ ಮೊತ್ತ ರೂ.71,000 ರೈತರ ವಿಮಾ ಕಂತು ಶೇ.5 ರಂತೆ 3,550 ಆಗಿದೆ. ಬೆಳೆ ವಿಮಾ ಮೊತ್ತವು ಬೆಳೆ ಸಾಲ ಪಡೆಯುವ ಮತ್ತು ಸಾಲ ಪಡೆಯದ ರೈತರಿಗೆ ಒಂದೇ ಆಗಿರುತ್ತದೆ, ಬೆಳೆ ವಿಮಾ ಮೊತ್ತವನ್ನು ಪಾವತಿಸಲು ಹತ್ತಿರದ ರಾಷ್ಟ್ರೀಕೃತ ಬ್ಯಾಂಕ್ ಶಾಖೆಗಳಲ್ಲಿ ಸಹಕಾರಿ ಸಂಘಗಳನ್ನು ಮತ್ತು ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ.

**ಅಗತ್ಯ ದಾಖಲಾತಿ ವಿವರ :** ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ, ಬ್ಯಾಂಕ್ ಪಾಸ್ ಪುಸ್ತಕ, ಆಧಾರ ಸಂಖ್ಯೆ ಹಾಗೂ ಸ್ವಯಂ ಘೋಷಿತ ಬೆಳೆ ವಿವರಗಳನ್ನು ನೀಡತಕ್ಕದ್ದು. ಕಂಪನಿಯ ಪ್ರತಿನಿಧಿಯನ್ನು ಸಂಪರ್ಕಿಸಲು ಮೊ.7406490045 ಗೆ ಕರೆ ಮಾಡಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ತೋಟಗಾರಿಕೆ ಅಧಿಕಾರಿ ರೈತ ಸಂಪರ್ಕ ಕೇಂದ್ರ ಹೊಸಪೇಟೆಮೊ.9164297220,ಮರಿಯಮ್ಮನಹಳ್ಳಿಮೊ.7204888978, ಕಮಲಾಪುರ ಮೊ.8123465548 ಹಾಗೂ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರು ಹೊಸಪೇಟೆ ಮೊ.8310291867 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

**ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ.**
ಐ.ಎಸ್.ಆರ್‌ರಸ್ತೆ, ಚಿತ್ತವಾಡ್ಗಿ, ಹೊಸಪೇಟೆ-583201
ದೂರವಾಣಿ ಸಂಖ್ಯೆ:08394-227749
E-mail:hospethuda@gmail.com

ಸಂಖ್ಯೆ:ಹೊನಅಪ್ರಾ/ಎ1/ಭೂಉಬ03/2025-26 ದಿನಾಂಕ: 01.07.2025.

**:ಸಾರ್ವಜನಿಕ ಪ್ರಕಟಣೆ:**

**(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 14(ಎ) ರಡಿಯಲ್ಲಿ)**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಹೊಸಪೇಟೆ ತಾ: ಮರಿಯಮ್ಮನಹಳ್ಳಿ ಹೋಬಳಿ ನಂದಿಬಂಡ ಗ್ರಾಮದ ಸ.ನಂ.16/ಬಿ3ಎ1ಎ2 ಒಟ್ಟು 4.25 ಎಕರೆ ಜಮೀನನ್ನು ಭೂಮಾಲೀಕರಾದ ಶ್ರೀ.ಸೈಯದ್ ಮೊಯಿಸುದ್ದೀನ್ ಪರವೇಜ್ ಹೊಸಪೇಟೆ ಇವರು ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಪ್ರಸ್ತಾಪಿತ ಜಮೀನು ಹೊಸಪೇಟೆಯ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕೃಷಿ ವಲಯದಲ್ಲಿ ಬರುತ್ತದೆ. ಮರಿಯಮ್ಮನಹಳ್ಳಿಯಿಂದ ಅಯ್ಯನಹಳ್ಳಿಗೆ ಹೋಗುವ ಹಾಲಿ 10.0ಮೀ ರಸ್ತೆಗೆ ಹೊಂದಿಕೊಂಡಿದ್ದು, ಸಂಪರ್ಕ ಇರುತ್ತದೆ. ಪ್ರಸ್ತಾಪಿತ ಜಮೀನನ್ನು ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಿ, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಕೈಗೆಟುಕುವ ದರದಲ್ಲಿ ನಿವೇಶನಗಳನ್ನು ಮಾರಾಟ ಮಾಡಲಾಗುವುದು ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿದಾರರು ತಿಳಿಸಿರುತ್ತಾರೆ.

ಕಾರಣ ಪ್ರಸ್ತಾಪಿತ ಜಮೀನನ್ನು ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಹೊಸ ಭೂಉಪಯೋಗ ನಿಗಧಿ ಪಡಿಸಲು ಸಾರ್ವಜನಿಕರ ಸಲಹೆ/ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಹೊಸಪೇಟೆ ಇವರಿಗೆ ಲಿಖಿತ ಆಕ್ಷೇಪಣೆ/ಸಲಹೆಗಳನ್ನುಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸುವಂತೆ ತಿಳಿಸಲಾಗಿದೆ. ಅವಧಿಯ ನಂತರ ಬಂದ ಆಕ್ಷೇಪಣೆ/ಸಲಹೆಗಳನ್ನು ಪರಿಗಣಿಸಲಾಗುವುದಿಲ್ಲ.

**ಸಹಿ/- ಆಯುಕ್ತರು, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ.**

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್ಎಂಸಿಎ/ಆರ್.ಓ.ಸಂಖ್ಯೆ/126

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ವಿಶ್ವಾವಸು

03–07–2025 – ಗುರುವಾರ

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಹಸ್ತ |
| ಯೋಗ | : ಪರಿಘ |
| ಕರಣ | : ಭವ |
| ಸೂರ್ಯೋದಯ | : 05:46:45 |
| ಸೂರ್ಯಾಸ್ತ | : 19:15:39 |
| ರಾಹು ಕಾಲ | : 14:12–15:53 |
| ಯಮಘಂಡ ಕಾಲ | : 05:47–07:28 |
| ಗುಳಿಕ ಕಾಲ | : 09:09–10:50 |




ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
ಹಂಪಿ ಟೈಮ್ಸ್
ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ
9448633038, Email:hampitimes@gmail.com

# ವಚನ ಸಾಹಿತ್ಯ ಸಂಶೋಧನೆಗೆ ಜೀವನ ಮುಡುಪಿಟ್ಟ ಡಾ.ಫ.ಗು.ಹಳಕಟ್ಟಿ

## ಪ್ರಾಂಶುಪಾಲೆ ಡಾ.ಎನ್.ಮಮತಾ ಅಭಿಮತ



■ **ಹಂಪಿ ಟೈಮ್ಸ್ ಚಿತ್ರದುರ್ಗ**

ವಿಶ್ವಕ್ಕೆ ಮಾದರಿಯಾದ ವಚನ ಸಾಹಿತ್ಯದ ಸಂಶೋಧನೆಗೆ ಡಾ.ಫ.ಗು.ಹಳಕಟ್ಟಿ ಜೀವನವನ್ನೇ ಮುಡುಪಿಟ್ಟರು. ಲಾಭ ತರುವ ವಕೀಲಿ ವೃತ್ತಿಯನ್ನು ಬಿಟ್ಟು, ಸತತ 60 ವರ್ಷಗಳ ಕಾಲ ವಚನ ಸಂಶೋಧನೆ ಹಾಗೂ ಪ್ರಕಟಣೆ ಕಾರ್ಯಕೈಗೊಂಡು 250ಕ್ಕೂ ಅಧಿಕ ವಚನಕಾರರನ್ನು ನಾಡಿಗೆ ಪರಿಚಯಿಸಿಕೊಟ್ಟರು ಎಂದು ಭರಮಸಾಗರ ಬಾಪೂಜಿ ಪದವಿಪೂರ್ವ ಕಾಲೇಜು ಪ್ರಾಂಶುಪಾಲೆ ಡಾ.ಎನ್.ಮಮತಾ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರ ಸಭೆ ಸಹಯೋಗದಲ್ಲಿ, ಡಾ.ಫ.ಗು.ಹಳಕಟ್ಟಿ ಜನ್ಮ ದಿನದ ಅಂಗವಾಗಿ ಆಯೋಜಿಸಲಾಗಿದ್ದ, ವಚನ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಅವರು ಮಾತನಾಡಿದರು.

ವಚನ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಲು ಜನ್ಮಿಸಿದ ಕಾರಣೀಭೂತ ಡಾ. ಫ.ಗು. ಹಳಹಟ್ಟಿಯವರನ್ನು ಸಾಹಿತಿ ಸಿಂಪಗೆ ಲಿಂಗಣ್ಣ 'ಕರ್ನಾಟಕದ ಮ್ಯಾಕ್ಸ್ಮುಲ್ಲರ್' ಎಂದು ಕರೆದಿದ್ದಾರೆ. ಸಾಹಿತಿ ಬಿ.ಎಂ.ಶ್ರೀಕಂಠಯ್ಯನವರು 'ವಚನಗುಮ್ಮಟ' ಎಂದು ಹೊಗಳಿದ್ದಾರೆ. ಉತ್ತರ ಕರ್ನಾಟಕದ ಮನೆಗಳಲ್ಲಿ ದೇವರ ಜಗಲಿಯಲ್ಲಿ ಪೂಜೆಗೆ ಇರಿಸಿದ್ದ ವಚನ ಸಾಹಿತ್ಯದ ತಾಳೆಗರಿಗಳನ್ನು ಸಂಗ್ರಹಿಸಿ, ಸಂರಕ್ಷಿಸಿ, ಅಧ್ಯಯನ ಮಾಡಿ ವಚನಗಳನ್ನು ಪ್ರಕಟಿಸಿ, ವಚನಕಾರರ ಚಿಂತನೆಯನ್ನು ಜಗತ್ತಿಗೆ ತೊರ್ಪಡಿಸಿದರು. 12 ಶತಮಾನದ ವಚನ ಕ್ರಾಂತಿ 'ವಿಶ್ವಕ್ಕೆ ಮಾದರಿಯಾದ ಸಾಮಾಜಿಕ ಕ್ರಾಂತಿ'ಯಾಗಿದೆ. ಇದನ್ನು ಜಗತ್ತಿಗೆ ಪರಿಚಯಿಸಿದ ಡಾ.ಫ.ಗು.ಹಳಕಟ್ಟಿಯವರನ್ನು 'ವಚನ ಸಾಹಿತ್ಯ ಪಿತಾಮಹ' ಎಂದು ಕರೆಯಲಾಗುತ್ತದೆ ಎಂದರು.

ಡಾ.ಫ.ಗು.ಹಳಕಟ್ಟಿ ಅವರು ಎಂದಿಗೂ ಹಣ ಹಾಗೂ ಸಂಪತ್ತಿಗಾಗಿ ವಚನಗಳ ಸಂಶೋಧನೆ ಕೈಗೊಳ್ಳಲಿಲ್ಲ. ಅವರ ಮಗ ಅಪಘಾತಕ್ಕೆ ತುತ್ತಾಗಿ ಮರಣ ಹೊಂದಿದರು, ಧೃತಿಗೆಡದೆ ವಚನ ಸಂಶೋಧನೆಯನ್ನು ಮುಂದುವರಿಸಿದರು. ಇವರ ವ್ಯಕ್ತಿತ್ವ ನಾಡಿಗೆ ಮಾದರಿಯಾಗಿದೆ. ದುರ್ದೈವದ ಸಂಗತಿಯಂದರೆ, ಡಾ.ಫ.ಗು.ಹಳಕಟ್ಟಿ ಜೀವಿತ ಕಾಲದಲ್ಲಿ ಅವರ ಕಾರ್ಯವನ್ನು ಜನರು ಹೆಚ್ಚಾಗಿ ಗುರುತಿಸಲಿಲ್ಲ. ಆದರೆ ವಿಜಯಪುರದಲ್ಲಿ ವಾಸವಿದ್ದ ಡಾ.ಫ.ಗು.ಹಳಕಟ್ಟಿಯವರ ಮನೆಗೆ ಅಂದಿನ ರಾಜ್ಯಪಾಲರಾದ ಜಯಚಾಮರಾಜೇಂದ್ರ ಒಡೆಯರ್ ಭೇಟಿ ನೀಡಿ ಗೌರವಿಸಿದರು. ಮಠಗಳು ಡಾ.ಫ.ಗು.ಹಳಕಟ್ಟಿಯವರನ್ನು ಸ್ಮರಿಸುವ ಕೆಲಸ ಮಾಡಬೇಕು. ಇಂದಿನ ಪೀಳಿಗೆಗೆ ಅವರ ಕೊಡುಗೆ ಮತ್ತು ವ್ಯಕ್ತಿತ್ವದ ಪರಿಚಯ ಮಾಡಿಕೊಡಬೇಕು ಎಂದು ಪ್ರಾಂಶುಪಾಲೆ ಡಾ.ಎನ್.ಮಮತಾ ಹೇಳಿದರು.

ಉಪವಿಭಾಗಾಧಿಕಾರಿ ಮೆಹಬೂಬ್ ಜಿಲಾನಿ ಖುರೇಷಿ ಮಾತನಾಡಿ, ವಿಶ್ವ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿರುವ ಕನ್ನಡ ವಚನ ಸಾಹಿತ್ಯವನ್ನು ಸಂಗ್ರಹಿಸಿ, ಸಂರಕ್ಷಿಸಿ, ಜನತೆಗೆ ಪರಿಚಯಿಸಿದ ಡಾ.ಫ.ಗು.ಹಳಕಟ್ಟಿಯವರ ಸಾಹಿತ್ಯ ಸೇವೆ ಅವಿಸ್ಮರಣೀಯ. ವಚನ ಸಾಹಿತ್ಯ ಮತ್ತು ವಚನಕಾರರ ಬಗ್ಗೆ ಅಮೂಲಾಗ್ರವಾಗಿ ತಿಳಿಯಲು ಡಾ.ಫ.ಗು.ಹಳಕಟ್ಟಿ ಅವರಿಂದ ಸಾಧ್ಯವಾಗಿದೆ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನಾ ಪ್ರಾಧಿಕಾರ ಅಧ್ಯಕ್ಷ ಆರ್.ಶಿವಣ್ಣ ಮಾತನಾಡಿ, ಫ.ಗು.ಹಳಕಟ್ಟಿಯವರು ವಚನ ಸಾಹಿತ್ಯದ ಮೂಲ ಪ್ರತಿಗಳ ಸಂಗ್ರಹಕ್ಕೆ ಮನೆ ಮನೆಗಳಿಗೆ ಸೈಕಲ್ ಮೂಲಕ ತೆರಳಿ, ಹುಡುಕಿ, ಸಂಗ್ರಹಿಸಿ ವಚನ ಸಾಹಿತ್ಯದ ಬೆಳಕು ಹರಡಿದ್ದಾರೆ ಎಂದರು.

ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಂ.ಕೆ. ತಾಜ್‌ಪೀರ್ ಮಾತನಾಡಿ, ಫ.ಗು.ಹಳಕಟ್ಟಿಯವರು ಸ್ವಾತಂತ್ರ್ಯ ಪೂರ್ವದಲ್ಲಿ ದೇಶದ ಸ್ವಾತಂತ್ರಕ್ಕಾಗಿ ಹೋರಾಡಿದರು. ವಚನ ಸಂಶೋಧನೆ ಜೊತೆಗೆ ನಿಸ್ವಾರ್ಥ ಜನಸೇವೆಯನ್ನು ಮಾಡಿದರು. ಆಕಸ್ಮಿಕವಾಗಿ ದೊರೆತ ವಚನಗಳ ಗಂಟು ಮುಂದೆ ಫ.ಗು.ಹಳಕಟ್ಟಿಯವರ ಜೀವನದ ಮುಖ್ಯ ಉದ್ದೇಶವಾಯಿತು. ಈ ಆಕಸ್ಮಿಕ ಘಟನೆಯ ಹಿಂದೆ ದೇವರ ಇಚ್ಚೆಯಿದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಂ.ಶಿವಸ್ವಾಮಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ. ಗುರುನಾಥ, ಉಪವಿಭಾಗಾಧಿಕಾರಿಗಳ ಕಚೇರಿ ತಹಶೀಲ್ದಾರ್ ನರಸಿಂಹಮೂರ್ತಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಮಳಲಿ ಶ್ರೀನಿವಾಸ್, ನಿಜಲಿಂಗಪ್ಪ ಸ್ಮಾರಕ ಟ್ರಸ್ಟ್ ಕಾರ್ಯದರ್ಶಿ ಷಣ್ಮುಖಪ್ಪ, ಉಪನ್ಯಾಸಕರ ಸಂಘದ ಮಾಜಿ ಅಧ್ಯಕ್ಷ ಎಸ್.ಲಕ್ಷ್ಮಣ್, ಸಾಹಿತಿ ಆನಂದ ಮೂರ್ತಿ ಸೇರಿದಂತೆ ಮತ್ತಿತರರು ಇದ್ದರು. ಶಿಕ್ಷಕಿ ಗೀತಾ ಭರಮಸಾಗರ ನಿರೂಪಿಸಿದರು.

# ಹೇ ಮನಸೇ ಯಾಕೆ ಹೀಗೆ?

ನಮ್ಮ ತಂದೆ ತಾಯಿಗಳು ನಮಗೆ ಗೊತ್ತು.ಅದರೆ ಅವರ ಭಾವನೆಗಳು ಹಾಗೂ ಅವರು, ನಮಗೆ ಅರ್ಥವಾಗುವುದೇ ಇಲ್ಲ.ಅವರ



ನೋವುಗಳು ನಮಗರ್ಥವಾದಾಗ ಮಾತ್ರ ಅವರು ನಮಗರ್ಥವಾದಂತೆ.

ಬುದ್ಧ ಗೊತ್ತು ಆತನ ಸಿದ್ಧಾಂತಗಳು ಗೊತ್ತು ಆದರೆ ಬುದ್ಧತ್ವ ನಮಗರ್ಥವಾಗುವುದೇ ಇಲ್ಲ. ತಿಳುವಳಿಕೆ ಹಾಗೂ ಪರೀಕ್ಷೆಗಳಲ್ಲಿ ಅಂಕಗಳನ್ನು ಗಳಿಸಲು ಮಾತ್ರ ನಾವು ಮಹಾನ್ ವ್ಯಕ್ತಿಗಳ ಬಗ್ಗೆ,ಘಟನೆಗಳ ಬಗ್ಗೆ ಓದಿಕೊಳ್ಳುತ್ತೇವೆ ತಿಳಿದುಕೊಂಡಿದ್ದೇವೆಯೇ ವಿನಃ ವ್ಯಕ್ತಿಗಳ ಮನದಾಳಕ್ಕೆ, ವಿಷಯಯಗಳ ಆಳಕ್ಕಿಳಿದು ನಾವು ಅರ್ಥ ಮಾಡಿಕೊಳ್ಳು ವುದಿಲ್ಲ. ಎಲ್ಲವುದರಲ್ಲಿಯೂ ಸೀಮಿತತೆ, ಸಿನೀಮಿಯತೆ. ಪ್ರಚಾರ ಗಿಟ್ಟಿಸುವ ಹಪಹಪಿ , ಗಿಮಿಕ್ ಗಳ ಸುತ್ತ ನಮ್ಮ ಮನ ಗಿರಕಿ ಹೊಡೆಯುತ್ತಲೇ ಇರುತ್ತದೆ.

ಶ್ರವಣ ಕುಮಾರನ ಬಗ್ಗೆ ನಮಗೆ ಗೊತ್ತು.ಅವನ ಮಾತಾ ಪಿತೃ ಭಕ್ತಿಯ ಬಗ್ಗೆ ಒಬ್ಬರಿಗಿಂತ ಒಬ್ಬರಿಗೆ ವಿಷಯ ಚನ್ನಾಗಿ ಗೊತ್ತು.ಅದರೆ ಶ್ರವಣನ ಹಾಗೆ ನಾವಾಗುವುದಿಲ್ಲ.ಯಾಕೆಂದರೆ ಶ್ರವಣನ ಮನದಾಳ ಹಾಗೂ ಶ್ರವಣ ನಮಗರ್ಥವಾಗಿಯೇ ಇಲ್ಲ.

ಇತಿಹಾಸ ನಿರ್ಮಿಸುವವರು ನಾವಾಗುತ್ತಿಲ್ಲ.ಕೇವಲ ಇತಿಹಾಸವನ್ನು ಓದಿಕೊಂಡವರು ನಾವಾಗಿದ್ದೇವೆ.ಸಾಂಧರ್ಭಿಕವಾಗಿ ಬದುಕುವ ಮಾತನಾಡುವ,ಪರರು ನಮ್ಮನ್ನು ಮೆಚ್ಚಿಕೊಳ್ಳುವಂತೆ ಮಾಡುವ ಕಲೆ ನಮಗೆ ಪಕ್ಕಾ ಗೊತ್ತು.

ಮಕ್ಕಳಿಗೆ ಪಾಠ ಮಾಡುವಾಗ ವಿಷಯವನ್ನು ವಿದ್ಯಾರ್ಥಿಗಳಿಗೆ ಚನ್ನಾಗಿ ಅರ್ಥಗರ್ಭಿತವಾಗಿ ಬೋಧಿಸುತ್ತೇವೆ ಅದು ಪರೀಕ್ಷೆ ಹಾಗೂ ಅಂಕಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು..ಅದರೆ ಅದನ್ನು feel ಮಾಡುವುದಿಲ್ಲ. feel ಮಾಡುವುದನ್ನು ನಾವು ವಿದ್ಯಾರ್ಥಿಗಳಿಗೆ ಹೇಳಿಕೊಡುವುದಿಲ್ಲ.

ಅನುಭವಿಸುವಿಕೆ ಆನಂದದ, ಸಾಧನೆಯ ರಹದಾರಿ.

ವಿದೇಶಿಯರು ನಮ್ಮ ದೇಶದ ಐತಿಹಾಸಿಕ ಸ್ಥಳಗಳಿಗೆ ಬಂದಾಗ ಅವರ್ಯಾರೂ ಸೆಲ್ಫಿ ತೆಗೆದುಕೊಳ್ಳುವುದಿಲ್ಲ.ಸ್ಮಾರಕಗಳನ್ನು ,ಶಿಲ್ಪಕಲೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾನರೆ. ಬೆರಗಾಗುತ್ತಾರೆ. ಸ್ಥಿತಿಯನ್ನು ಅನುಭವಿಸಿ ಆನಂದಿಸುತ್ತಾರೆ ಹಾಗೂ ಅವುಗಳ ಭಾವಚಿತ್ರಗಳನ್ನು ನಾನಾ ಕೋನಗಳಲ್ಲಿ ತೆಗೆದುಕೊಳ್ಳುತ್ತಾರೆ. ವಿಕೃತಿ ಎಂಬಂತೆ ಅದೇ ಜಾಗಗಳಲ್ಲಿ ನಿಂತು ನಾವು ಸೆಲ್ಫಿ ತೆಗೆದುಕೊಳ್ಳುತ್ತೇವೆ.ಅಲ್ಲಿ ನಮಗೆ ವಿಷಯ ಬೇಕಿಲ್ಲ.ನಾವು ಮಾತ್ರ ಬೇಕು.ನಾವು ಅವುಗಳನ್ನು ಗಮನಿಸುವುದಿಲ್ಲ,ಜಿಜಜಟ ಮಾಡುವುದಿಲ್ಲ.. ಯಾಕೆ ನಾವೆಲ್ಲ ಹೀಗಾಗೋದ್ವಿ..

ಚೀಪ್ ಪಬ್ಲಿಸಿಟಿ, ಅಹಂ, ಸೀಮಿತತೆ, ಸಿನೀಮಿಯತೆ, ಧನ್ಯತಾಶೂನ್ಯ ಮನೋಭಾವ, ನಮ್ಮ ವಿಕೃತಿ ನಮ್ಮನ್ನು ನಮಗರಿವಿಲ್ಲದಂತೆ ಈ ಸ್ಥಿತಿಗೆ ತಂದು ನಿಲ್ಲಿಸಿದೆ. ಮತ್ತೆ ನಮ್ಮ ಮುಂದಿನ ಪಯಣ ಮತ್ತೆಲ್ಲಿಗೋ? ಇನ್ನಾವ ಹೀನ ಸ್ಥಿತಿಯ ಕಡೆಗೋ? ಹೇ ಮನಸೇ ಯಾಕೆ ಹೀಗೆ?

# **ಮಹಿಮ**

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

# ತುಂಗಭದ್ರಾ ಜಲಾಶಯ ಶೇ.75 ಭರ್ತಿ, ನದಿಗೆ ನೀರು

**ಮೊದಲ ಪುಟದಿಂದ**

ಗುರುತಿಸುವಿಕೆ, ಪರ್ಯಾಯ ವಸತಿ ವ್ಯವಸ್ಥೆಗಳು ಮತ್ತು ತುರ್ತು ಸ್ಥಳಾಂತರ ಯೋಜನೆಗಳನ್ನು ರೂಪಿಸುವುದು ಅತಿ ಮುಖ್ಯ. ಸರ್ಕಾರ ಮತ್ತು ಸ್ಥಳೀಯ ಆಡಳಿತಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕಿದೆ. ತುಂಗಭದ್ರಾ ಜಲಾಶಯದ ಈ ತಾಂತ್ರಿಕ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವುದು ಅತ್ಯಗತ್ಯ. ಕ್ರಸ್ಟ್ ಗೇಟ್‌ಗಳ ದುರಸ್ತಿ ಅಥವಾ ನವೀಕರಣ, ಜಲಾಶಯದ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಅನುವು ಮಾಡಿಕೊಡುವುದು ಇಂದಿನ ತುರ್ತು ಅಗತ್ಯವಾಗಿದೆ. ತುಂಗಭದ್ರಾ ಜಲಾಶಯವು ಈ ಪ್ರದೇಶದ ಕೃಷಿ ಮತ್ತು ಆರ್ಥಿಕತೆಗೆ ಜೀವನಾಡಿಯಾಗಿದೆ. ಆದರೆ, ಅದರ ಪ್ರವಾಹ ನಿಯಂತ್ರಣ ಸಾಮರ್ಥ್ಯದ ಮಿತಿಯು ಜನರಿಗೆ ನಿರಂತರ ಬೆದರಿಕೆಯಾಗಿದೆ. ಸರ್ಕಾರ ಮತ್ತು ಸಂಬಂಧಿತ ಇಲಾಖೆಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ತುರ್ತು ಕ್ರಮಗಳನ್ನು ಕೈಗೊಳ್ಳುವ ಮೂಲಕ ನದಿಪಾತ್ರದ ಜನರ ಸುರಕ್ಷತೆಯನ್ನು ಖಾತ್ರಿಪಡಿಸಬೇಕು ಎಂಬುದು ಜನರ ಒತ್ತಾಯವಾಗಿದೆ.

# ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

2025–26ನೇ ಸಾಲಿನ ಮೆಟ್ರಿಕ್ ಪೂರ್ವ (1 ರಿಂದ 8ನೇ ತರಗತಿ) ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ) ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನ ಯೋಜನೆಯಡಿ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಗಳು ಎಸ್‌ಎಸ್‌ಪಿ ಪೋರ್ಟಲ್ https://ssp.karnataka.gov.in ನಲ್ಲಿ ಸೆಪ್ಟೆಂಬರ್ 30 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯಕ್ಕೆ ಸೇರಿದವ ರಾಗಿರಬೇಕು. ಎಲ್ಲಾ ಮೂಲಗಳಿಂದ ವಿದ್ಯಾರ್ಥಿಯ/ ಪಾಲಕರ/ ಪೋಷಕರ ವಾರ್ಷಿಕ ಆದಾಯವು ರೂ.1 ಲಕ್ಷ ಮೀರಿರಬಾರದು.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 1ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹೊಸದಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. 2024–25ನೇ ಸಾಲಿನಲ್ಲಿ ಅನುಮೋದನೆಗೊಂಡ ಅರ್ಜಿಗಳು ಹಾಗೂ ವಿದ್ಯಾರ್ಥಿವೇತನ ಮಂಜೂರಾದ ವಿದ್ಯಾರ್ಥಿಗಳ ಅರ್ಜಿಗಳನ್ನು Auto Renewalಎಂದು ಪರಿಗಣಿಸಲಾಗುವುದು. ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿ ವಿದ್ಯಾರ್ಥಿವೇತನ ಮಂಜೂರಾಗದೇ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ಹೊಸದಾಗಿ ಅರ್ಜಿಯನ್ನು ಸಲ್ಲಿಸಬೇಕು.

ಅರ್ಜಿ ಸಲ್ಲಿಸುವ ಪೂರ್ವದಲ್ಲಿ ವಿದ್ಯಾರ್ಥಿಗಳು ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಯಾಗಿರುವ (NPCI MAPPING ACTIVE) ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು.

ಶುಲ್ಕ ಮರುಪಾವತಿಯ ಪ್ರಕ್ರಿಯೆಯು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಸರ್ಕಾರದ ಆದೇಶ ಗಳು ಹಾಗೂ ಮಾರ್ಗ ಸೂಚಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ವೆಬ್‌ಸೈಟ್ https://dom.karnataka.gov.in ಅನ್ನು ವೀಕ್ಷಿಸಬಹುದು ಹಾಗೂ ಕೊಪ್ಪಳ ಜಿಲ್ಲಾ ಅಲ್ಪಸಂಖ್ಯಾತರ ಕಛೇರಿ ಹಾಗೂ ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಕೊಪ್ಪಳ: 08539–225070, ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಕುಷ್ಟಗಿ: 8861610578, ಗಂಗಾವತಿ: 99862 44408, ಯಲಬುರ್ಗಾ: 8095191406 ಗೆ ಸಂಪರ್ಕಿಸಬಹುದು ಎಂದು ಇಲಾಖೆಯ ಜಿಲ್ಲಾ ಅಧಿಕಾರಿಗಳಾದ ಅಜ್ಮೀರ್ ಅಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಾ.ಫ.ಗು.ಹಳಕಟ್ಟಿಯವರ ಸೇವೆ ಸ್ಮರಣೀಯ



■ **ಹಂಪಿ ಟೈಮ್ಸ್ ಕೊಟ್ಟೂರು.**

12ನೇ ಶತಮಾನದ ಶರಣರ ಬದುಕನ್ನ, ಅವರ ವಚನಗಳನ್ನ ಸಂರಕ್ಷಿಸಿ ಉಳಿಸಿದ ಡಾ.ಫ.ಗು.ಹಳಕಟ್ಟಿಯವರ ಸೇವೆಯನ್ನು ಪ್ರತಿಯೊಬ್ಬರು ಸ್ಮರಿಸಬೇಕಿದೆ ಎಂದು ಗ್ರೇಡ್–2 ತಹಶಿಲ್ದಾರ್ ಎಂ.ಪ್ರತಿಭಾ ಹೇಳಿದರು.

ಕೊಟ್ಟೂರು ತಾಲೂಕು ಕಛೇರಿ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಬುಧವಾರ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಅವರ ಜನ್ಮ ದಿನಾಚರಣೆಯ ಪ್ರಯುಕ್ತ ಆಚರಿಸುವ "ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ" ಕಾರ್ಯಕ್ರಮದಲ್ಲಿ ಡಾ.ಫ.ಗು. ಹಳಕಟ್ಟೆಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ನಂತರ ಮಾತನಾಡಿದರು.

20 ವರ್ಷಗಳ ನಿರಂತರ ಪರಿಶ್ರಮದಿಂದ ತಾಳೆಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಮುದ್ರಣ ಮಾಡಿ ಸುಮಾರು 300ಕ್ಕೂ ಹೆಚ್ಚು ವಚನಕಾರರನ್ನು ಬೆಳಕಿಗೆ ತಂದರು. ಆ ಮೂಲಕ ವಚನಗಳನ್ನು ಸಂರಕ್ಷಿಸಿದ ಕಾರಣ ಇವರನ್ನು "ವಚನ ಪಿತಾಮಹಾ" ಎನ್ನಲಾಗುತ್ತದೆ.

ಆ ಮಹಾತ್ಮರ ಸೇವೆಯನ್ನು ಸ್ಮರಿಸುತ್ತಾ ಸರ್ಕಾರವು ಪ್ರತಿ ವರ್ಷವು ಈ ದಿನವನ್ನು "ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ"ಯಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪತಾಶಿಲ್ದಾರ್ ಅನ್ನದಾನೇಶ್ ಪತ್ತರ್, ಕಂದಾಯ ನಿರೀಕ್ಷಕರು ಹಾಲಸ್ವಾಮಿ, ಕೇಸ್ ವರ್ಕರ್ ಹನುಮಂತಪ್ಪ, ಗ್ರಾಮ ಲೆಕ್ಕಾಧಿಕಾರಿಗಳು ಹಳ್ಳಿ ಹರೀಶ್,ಶರಣಬಸವೇಶ್ವರ, ಸೌಭಾಗ್ಯಮ್ಮ, ದ್ಯಾಮವ್ವ, ಮಂಗಳ ಸೇರಿದಂತೆ ಇತರರು ಇದ್ದರು.

